ದೇಹವೇ ತಾನು ಅಂತ್ಹೇಳಿ ಇದ್ದವನು ಅವನು ಸತ್ಯವನ್ನು ಹೇಳುವಂಥಾದ್ದು ಹೇಗೆ. ಥ್ಲಂ. ದೇಹವೇ ತಾನು ಎಂಬುದು ಅಸತ್ಯ. ಫೌಂಡೇಷನ್ನೇ ಅಸತ್ಯ. ತಂದೆ-ತಾಯ ಗರ್ಭದಿಂದ ಅವ ಜನ್ಮಕ್ಕೆ ಬಂದದ್ದು ಅಂದರೆ ದೇಹ. ಇದರ ಒಳಗೆ ಇರುವವನಿಗೆ ತಂದೆ-ತ್ಯಾಯಿ ಯಾರು? ಥ್ಲಂ. ಅವನಿಗೆ ತಂದೆ-ತಾಯಿ ಇಲ್ಲ. ಅವನನ್ನು ನಾವೀಗ ಪತ್ತೆ ಹಚ್ಚಬೇಕು. ಯಾರು ಪತ್ತೆ ಹಚ್ಚಬೇಕು? ಈ ಮನಸ್ಸು ಪತ್ತೆ ಹಚ್ಚಬೇಕು. ಈ ಮನಸ್ಸು ಬುದ್ಧಿಗೆ ಎಟುಕುವುದಿಲ್ಲ. ಹಾಗಾದ್ರೆ ಪತ್ತೆ ಹಚ್ಚುವಂಥಾದ್ದು ಹೇಗೆ? ಅದೇ ಮನಸ್ಸು ಖಾಲಿಯಾಗಬೇಕು. ಮೊದಲು. ಥ್ಲಂ. ನಿಮಗೆ ಕನ್ನಡ ಬರ್ತದಾ? ಆಂ ಏನಂತೆ.

ಒಬ್ಬರು - ಇಲ್ಲ ಅಜ್ಜ ಬರುವುದಿಲ್ಲ.

ಅಜ್ಜ - ನಿನ್ನೆ Phone ಮಾಡಿದ್ದು ನೇವೆಯಾ? ಆಂ. ನಿಮಗೆ ಕನ್ನಡ ಬರೋದಿಲ್ಲ. ನಿಮಗೆ ಕನ್ನಡ ಬರುತ್ತಾ (ಮತ್ತೊಬ್ಬರನ್ನು ನೋಡಿ).

ಮತ್ತೊಬ್ಬರು - ಆಂ. ಬರುತ್ತೆ.

ಅಜ್ಜ - ನೊಡುವವನು, ನೋಟ, ನೋಡಲ್ಪಡುವವನು ಒಂದೇ ಆದಾಗ ಮಾತ್ರ ಇಲ್ಲಿ ನೋಡುವಂಥಾದ್ದು. ನೋಡಲ್ಪಡುವವನು ಆದಾಗ ಮಾತ್ರ ನೋಡ್ತಾನಪ್ಪ. ಇವನು ನೋಡುವಂಥಾದ್ದು ಪ್ರತ್ಯೇಕವಾಗಿದ್ದುಕೊಂಡು ನೋಡ್ಲಿಕ್ಕಾಗೋದಿಲ್ಲ. ಆಂ. ನೋಡಲ್ಪಡುವವನ ವಿಕಾಸತ್ವವೇ ಸಾಕ್ಷಾತ್ಕಾರ.

ಅಜ್ಜ - ಸ್ವಲ್ಪ ಅವರಿಗೆ ಹೇಳಿ ಇಂಗ್ಲೀಷಿನಲ್ಲಿ. ನಮಗೆ ಇಂಗ್ಲೀಷ್ ಬರೋದಿಲ್ಲ.

ಡಾ। ಸುಧಾ - ನೀವು ಹೇಳಿ ಅಜ್ಜ. ನೀವು ಹೇಳಿದ್ದನ್ನ ನಾನು ಅವರಿಗೆ ಇಂಗ್ಲೀಷಿನಲ್ಲಿ ಹೇಳ್ತೀನೆ.

ಅಜ್ಜ - ಹೇಳಿ ಆಯ್ತಲ್ಲ ಎಲ್ಲ.

ಡಾ। ಸುಧಾ - ಇಂಗ್ಲೀಷಿನಲ್ಲಿ ಹೇಳಿದರು.

ಅಜ್ಜ - ಅವರು ಎಲ್ಲಿಂದ ಬದದ್ದು.

ಡಾ। ಸುಧಾ - ಸ್ವಿಡ್ಜರ್‌ಲ್ಯಾಂಡಿಂದ ಬಂದಿದ್ದಾರೆ.

ಅಜ್ಜ - ಎಷ್ಟು ಸಮಯ ಆಯಿತು ಬಂದು?

ಡಾ। ಸುಧಾ - ೧ ೧/೨ ವರ್ಷ ಆಯಿತಂತೆ.

ಅಜ್ಜ - ಈ ವರೆಗೆ ಎಲ್ಲಿದ್ದಾರೆ?

ಡಾ। ಸುಧಾ - ಬೆಂಗಳೂರಿನಲ್ಲಿ ೧ ೧/೨ ವರ್ಷದಿಂದ ಇದ್ದಾರೆ.

ಅಜ್ಜ - ಎಲ್ಲಿದ್ದಾರೆ ಹೆಚ್ಚಾಗಿ.

ಡಾ। ಸುಧಾ - ಇಲ್ಲಿ B.T.M. ಲೇಔಟ್‌ನಲ್ಲಿ ಅಲ್ಲಿದ್ದಾರೆ. ಭಾರತೀಯ ಸಂಸ್ಕೃತಿ, ಯೋಗ, ಮತ್ತೆ ಭಾರತೀಯ ಆಧ್ಯಾತ್ಮದ ಬಗ್ಗೆ ತಿಳಿದುಕೊಳ್ಳಲಿಕ್ಕೆ ಬಂದಿದ್ದಾರಂತೆ.

ಅಜ್ಜ – ಹ. ಹ. ಹ. . . . . ಅಲ್ಲಿಯವರು ಇಲ್ಲಿ ಕಲೀಲಿಕ್ಕೆ ಬರ್ತಾರೆ, ಇಲ್ಲಿಯವರು ಅಲ್ಲಿ ಹೋಕ್ತಾರೆ. ಇದು ಪ್ರಾಧಾನ್ಯವಲ್ಲ ಎಂಬ ಭಾವನೆಯಿಂದ ಅಲ್ಲಿಗೆ ಹೋಕ್ತಾರೆ. ಅವರು ಇಲ್ಲಿಗೆ ಬರ್ತಾರೆ.

ಡಾ। ಸುಧಾ – ನಮ್ಮಲ್ಲಿರುವುದು ನಮಗೆ ಬೇಡ. ಯಾವುದಿಲ್ಲವೋ ಅದು ಬೇಕು ನಮ್ಗೆ.

ಅಜ್ಜ – ಹಾಗಾಗಿ ಅವರು ಕಲಿಯುವಂಥ ವಿಚಾರ ಸರಿಯಾಗಿದೆ. ಅವರು ಯಾವುದನ್ನು ತಿಳಿಯಬೇಕೂಂತ್ಹೇಳಿ ತಿಳ್ಕಿದ್ದಾರೆ ಅದು ಸರಿಯಾದ್ದೆ. ಹ. ಹ. ಆಧ್ಯಾತ್ಮ ಅನ್ನೋದು ಭಾರತೀಯ ಸಂಸ್ಕೃತಿಯಲ್ಲ. ಅದು ಎಲ್ಲದಕ್ಕೂ ಸಂಬಂಧಪಟ್ಟದ್ದು. ಅದು ಒಂದು ಕಡೆಗೆ ಸಂಬಂಧಿಸಿದ್ದಲ್ಲ. ಅದು ಇಡೀ ಜಗತ್ತಿಗೆ ಅನ್ವಯಿಸುವಂಥಾದ್ದು. ಭಾರತಕ್ಕೆ ಒಂದಕ್ಕೆ ಅದು ಸಂಬಂಧಿಸಿದ್ದು ಅಂತಾದ್ರೆ ಅದು ಬ್ಯಾಡ ನಮಗೆ. ಆದ್ದರಿಂದ ಫಾರಿನ್ನರು ಭಾರತಕ್ಕೆ ಬರಲಿಕ್ಕೆ ಕಾರಣ ಆಯ್ತು. ಅವರಿಗೂ ಅನ್ವಯಿಸ್ತದೆ. ಆಂ. ಅದನ್ನು ಹೇಳಿಬಿಡಪ್ಪ ಅವರಿಗೆ. ಅದಕ್ಕೆ ಆಧಾರ ನೋಡಿ ಅವರು ಬಂದದ್ದೇ ಆಧಾರ. ಇಂಥವರು ತುಂಬಾ ಜನ ಬರ್ತಾರೆ.

ಡಾ। ಸುಧಾ – ಇಂಗ್ಲಿಷಿನಲ್ಲಿ ಹೇಳಿದರು.

ಅಜ್ಜ – ಎಲ್ಲವೂ ಒಳ್ಳೆಯದು. ನಾವು ಗ್ರಹಿಸಿದ್ದು ಹಿಮಾಲಯ ದೊಡ್ಡ ಪರ್ವತ ಅಂತ್ಹೇಳಿ. ಅಥವಾ ಬಹಳ ಶ್ರೇಷ್ಠವಾದ್ದು ಅಂತ. ಸಾಕು ಅಷ್ಟೇ ಸಾಕು ವಿಚಾರ. ಅದು ಮೊನ್ನೆಯೇ ಹೇಳಿ ಆಗಿದೆ. ನೀವು ಬೆಂಗಳೂರಾ?

ಒಬ್ಬರು – ಹೌದು. ಜಯನಗರದಿಂದ ಬಂದದ್ದು.

ಅಜ್ಜ – ಆಂ. ಜಯನಗರ ಏನಂತೆ.

ಡಾ। ಸುಧಾ – ಅವರು ಪ್ರಶ್ನೆ ಕೇಳಬೇಕಂತೆ. ನಮಗೆ ನಿಜವಾಗ್ಲು ಗುರುವಿನ ಅವಶ್ಯಕತೆ ಇದೆಯೋ ಇಲ್ಲವೋ? ಆ ಹೊರಗಿನ ಗುರು ನಮ್ಮ ಒಳಗಿನ ಗುರುವನ್ನು ತೋರಿಸ್ಲಿಕ್ಕಾಗಿ ಇರಬೇಕಾದವನು. ಆದ್ರೆ ನಮಗೆ ಗುರುವನ್ನು ಹುಡುಕಿಕೊಂಡು ಹೋದ್ರೆ ಬಹಳಷ್ಟು ಜನ ಸಿಕ್ತಾರೆ. ಆದ್ರೆ ನಮಗೆ ಅವರಿಂದ ನಮಗೆ ತುಂಬ ನಿರಾಶೆ ಆಗ್ತದೆ. ಆದ್ರಿಂದ ನಿಜವಾದ ಗುರುವನ್ನು ನಾವು ಹುಡುಕುವುದು ಹೇಗೆ? ಗುರು ಬೇಕಾ ನಮ್ಗೆ. ಬೇಕಿದ್ರೆ ನಿಜವಾದ ಗುರು ಅಂದರೆ ಹೇಗಿರ್ತಾನೆ. ನಮಗೆ ಗುರು ಸಿಕ್ಕದ್ದಾನಾ ಇಲ್ಲವಾ ಅಂತ ಹೇಗೆ ಗೊತ್ತಾಗ್ಬೇಕು. ಅಂತ ಪ್ರಶ್ನೆ ಅವರದ್ದು.

ಅಜ್ಜ – ಈ ಪ್ರಶ್ನೆಯನ್ನು ಸ್ವಲ್ಪ ಹೆಚ್ಚು ಕಮ್ಮಿ ಮಾಡ್ಲಿಕ್ಕೆ ಸಾಧ್ಯ ಉಂಟಾ. ಸಣ್ಣ ರೂಪದಲ್ಲಿ. ಅಂದ್ರೆ ಗುರು ಒಳಗೇ ಇದ್ದಾನೆ. ಹೊರಗಿನಿಂದ ಒಬ್ಬ ತೋರಿಸಿಕೊಡಬಹುದು. ಆ ತೋರಿಸಿಕೊಡ್ಲಿಕ್ಕೆ ಒಳಗಿನಿಂದ ಅದ್ರಲ್ಲಿ ಎಷ್ಟು ಆಕಾಂಕ್ಷೆ ಉಂಟು ಅಂತ್ಹೇಳಿ. ಗುರು . . ಹೇಳ್ಲಿಕ್ಕೆ ಬರೋದಿಲ್ಲ. ಶಬ್ದಗಳು ಸಿಕ್ಕೊದಿಲ್ಲ. ಗುರುವನ್ನು ಹುಡುಕಿಕೊಂಡು ಎಲ್ಲಿಗೆ ಹೋಗುವುದು ನಾವು. ಗುರು ಎಲ್ಲಿದ್ದಾನೆ? ಯಾರು ಅಂತ್ಹೇಳಿ. ಆ ಗುರುವೇ ಇಲ್ಲಿಗೆ ಬರ್ತಾನೆ ಎಂಬುದು ಸಿದ್ಧಾಂತ. ಅಂದರೆ ಭಕ್ತ ಮತ್ತು ಭಗವಂತ. ಭಗವಂತನು ಭಕ್ತನಲ್ಲಿಗೆ ಬರ್ತಾನಂತೆ. ಆ್ಹಂ. ಭಗವಂತನಿಗೂ ಗುರುವಿಗೂ ಸ್ವಲ್ಪ ಹೆಚ್ಚಿ ಕಮ್ಮಿ ಅಲ್ಲಿ. ಅದು ಆ ಗುರು ಸಿಕ್ಕಬೇಕಾದ್ರೆ ಭಗವಂತನ ಆರ್ಡರ್ ಬೇಕು. ಹಾಗಾದ್ರೆ ಅವನು ಪರಮಾತ್ಮನಲ್ಲಿ ಎಷ್ಟು ನಂಬಿಕೆ ಇಟ್ಟಿದ್ದಾನೋ ಅಷ್ಟರಮಟ್ಟಿಗೆ ಗುರು ಸಿಗುವ ಸಾಧ್ಯತೆ ಉಂಟು. ಗುರು ಬಂದ್ರೂ ಅವನನ್ನು ಕಂಡು ಹಿಡಿಲಿಕ್ಕೆ ಸಾಧ್ಯತೆ ಇಲ್ಲ. ಆ್ಹಂ. ಅವ ಬಂದು ಏನ್ ಮಾಡ್ತಾನೆ. ಅವನಲ್ಲಿ ಯಾವುದು ಉಂಟೋ ಅದನ್ನು ಎತ್ತಿ ಬಿಡ್ತಾನೆ ಅಷ್ಟೆ. ಅವನ ಮನಸ್ಸಿನಲ್ಲಿ ಪರಿಣಾಮ ಉಂಟಾಗ್ತದೆ. ಹಾಗಾದ್ರೆ ಅದಕ್ಕೆ ಅವನೇ ಕಾರಣ. ಆ ಒಳಗಿನ ಗುರುವೇ ಹೊರಗಿನ ಗುರುವನ್ನು ತೋರಿಸಿಕೊಡ್ತಾನೆ. ಒಳಗಿಲ್ಲವಾದ್ರೆ ಹೊರಗಿನ ಗುರು ಸಿಕ್ಕೊದಿಲ್ಲ. ಹೊರಗೆ ಗುರು ಇಲ್ಲವೇ ಇಲ್ಲ. ಹೆಸರು ಕೀರ್ತಿಗೆ ಒಳಪಟ್ಟವನು ಗುರು ಅಲ್ಲ. ಆ್ಹಂ. ಗುರು ಯಾವ ರೀತಿಯಿಂದ ಸಿಕ್ಲಿಕ್ಕೂ ಸಾಕು. ವ್ಯಕ್ತದಿಂದಲೂ ಅವ್ಯಕ್ತದಿಂದಲೂ ಬರ್ಲಿಕ್ಕೂ ಸಾಕು. ನಮ್ಮ ಮನಸ್ಸಿನ ಆಕಾಂಕ್ಷೆಗಳೆಲ್ಲಾ ಹೋದಾಗ ನೋಡಿ ಗುರು ಅಲ್ಲಿ ಮಾತ್ರ ಗುರು ಸಿಕ್ತಾನೆ. ಗುರುವಿನ ಮಹತ್ವ ಅಲ್ಲಿ ಉಂಟು. ಅದು ಅವರವರ ಮೇಲೆ ಅವಲಂಬಿಸಿಕೊಂಡುಂಟು. ಆ್ಹಂ. ಇದನ್ನು ಯಾವ ರೀತಿ ವರ್ಣನೆ ಹೇಳ್ತೀಯಾ ಅಂತ ಗೊತ್ತಿಲ್ಲ. ಆ್ಹಂ. ಹೇಳು.

ಡಾ। ಸುಧಾ – ಇಂಗ್ಲೀಷಿನಲ್ಲಿ ಹೇಳಿದರು.

ಅಜ್ಜ – ಬಾಹ್ಯರೂಪದಲ್ಲಿ ಗುರುವನ್ನು ಪತ್ತೆಹಚ್ಚಲಿಕ್ಕೆ ಸಾಧ್ಯವಿಲ್ಲ. ಏನಂತೆ.

ಡಾ। ಸುಧಾ – ಅದೇ ಅಂತೆ ಅವರ ಪ್ರಶ್ನೆ. ಬಾಹ್ಯರೂಪದಲ್ಲಿ ಗುರುವನ್ನು ಕಂಡುಹಿಡಿಲಿಕ್ಕೆ ಸಾಧ್ಯ ಉಂಟಾ ಅಂತ.

ಅಜ್ಜ – ಸಾಧ್ಯವಿಲ್ಲ.

ಡಾ। ಸುಧಾ – ಅವರು ಬಹಳಷ್ಟು ಮಂದಿ ಗುರುಗಳನ್ನ ನೋಡಿದ್ದಾರಂತೆ. ಆದರೆ ಯಾರನ್ನು ನೋಡಿದರೂ ಇವರು ನನಗೆ ಗುರು ಆಗಬಹುದಾ ಇಲ್ಲವಾ ಅಂತ ಒಂದು ತರಹದ ಸಂಶವವಂತೆ. ಆದ್ದರಿಂದ ನಿಜವಾಗಿಯೂ ನನ್ನ ಗುರು ಯಾರು? ಅಂತ ಅವರಿಗಿನ್ನು ಸಿಕ್ಕಿಲ್ಲವಂತೆ. ಅವರಿಗೆ ಬಹಳಷ್ಟು ಮಂದಿ ಗುರುಗಳನ್ನು ಭೇಟಿಯಾಗುವ ಸಂದರ್ಭಗಳು ಬಂದಿದೆಯಂತೆ. ಆದರೆ ಆ ಆಧ್ಯಾತ್ಮಿಕಕ್ಕೆ ಹೋಗುವ ಆ ಸಂದರ್ಭ ಬಂದಾಗಲೂ ಅವರಿಗೆ ಈ ಜಗತ್ತು ಈ ಮಾಯೆ ಅನ್ನೋದು ಎಳೆಯುತ್ತಂತೆ.

ಅಜ್ಜ – ಯಾರಿಗೆ?

ಡಾ। ಸುಧಾ – ಇವರಿಗೆ. ನನಗೆ ಹೋಗಬೇಕು ಆಕಡೆ ನಿಜವಾಗಿಯು ಗುರು ಸಿಕ್ಕಿರಬದುದು. ನನಗೆ ಇದರಿಂದ ಆಧ್ಯಾತ್ಮಿಕದಲ್ಲಿ ಮುಂದೆ ಹೋಗಬಹುದು ಅಂತ ಅಂತಹ ಒಂದು ಸನ್ನಿವೇಷ ಬಂದ್ರೂ ನಾನು ಹಿಂದೇಟು ಹಾಕ್ತೀನಿ ನಾನು. ಅದು ಯಾಕೆ? ಅಂತ ಕೇಳ್ತಾ ಇದ್ದಾರೆ. ಒಂದು ಕಾಲು ಅಲ್ಲಿ, ಒಂದು ಕಾಲು ಇಲ್ಲಿ. ಈ ಕಡೆನೂ ಇಲ್ಲ, ನಾನು ಆ ಕಡೆನೂ ಇಲ್ಲ.

ಅಜ್ಜ – ಅದ್ರಲ್ಲಿಲ್ಲಾ ಅಂತ್ಹೇಳಿ ಗೊತ್ತಾಕ್ತದ ಕೇಳಿ. ಹಾಗೆ ಅರಿವಾಕ್ತದ.

ಡಾ। ಸುಧಾ – ಹೌದು. ಅಂದ್ರೆ ಅವರು ಕೆಲವು ಸಲ ಈ ಕಡೆ ಇರ್ತಾರಂತೆ. ಕೆಲವು ಸಲ ಆಕಡೆ ಇರ್ತಾರಂತೆ. ಹಾಗಾಗಿ ನಾನು ಆ ಸಿಗುವ ಸನ್ನಿವೇಷಗಳನ್ನು ಕಳ್ಕೊಳ್ತಿದಿನಿ. ಅದ್ಯಾಕೆ ಹಾಗೆ ಆಗುತ್ತೇ ಅಂತ ಕೇಳ್ತಿದಾರೆ.

ಅಜ್ಜ – ಬಾಹ್ಯದಲ್ಲಿ ಯಾವುದಾದ್ರೂ ಆಕಾಂಕ್ಷೆಗಳುಂಟಂತ.

ಡಾ। ಸುಧಾ – ಅವರಿಗೆ ಯಾವಾಗ್ಲೂ ಒಬ್ರು ಗುರು ರೂಪದಲ್ಲಿ ಮನಸ್ಸಲ್ಲಿ ಬಂದು ಒಂದು ತರಹ ಮುಖಗಳನ್ನು ಮಾಡುತ್ತಾ ಹೇಳ್ತಾರಂತೆ. ನೀವು ಒಳಗಡೆ ಹೋಗ್ಬೇಕು. ಹೊರಗಡೆ ಏನೂ ಇಲ್ಲಾಂತ. ಆದ್ರೆ ಅಂಥ ಗುರು ಅವರ ಜೊತೆ ಇದ್ದು ಅದನ್ನು ಮುಂದುವರೆಸ್ಲಿಕ್ಕೆ ಅವರಿಗೆ ಸನ್ನಿವೇಶ ಸಿಗಲಿಲ್ಲವಂತೆ. ಆದ್ರಿಂದ ಅವರಿಗೆ ಹಿಂದಿನ ಎಳೆತಗಳೇ ಎಳೀತಾ ಇದೆಯಂತೆ. ಹೀಗಿರೋದ್ರಿಂದ ನನಗೊಬ್ಬ ಗುರು ಸಿಗೋವರೆಗೂ ನನಗೆ ಆಧ್ಯಾತ್ಮಿಕಕ್ಕೆ ಹೋಗೋಕಾಗೂಲ್ಲಾ ಅಂತ ಅನ್ನಿಸ್ತದಂತೆ.

ಅಜ್ಜ – ಹೌದು. ಗುರುವನ್ನು ನಾವು ಎಲ್ಲಿ ಹುಡುಕಿಕೊಂಡು ಹೋಗುವುದು. ಈಗ ಎಲ್ಲಿಗ್ಹೋಗುವುದು. ಅವ ಎಲ್ಲಿದ್ದಾನೆ. ಒಳಗೆ ಒಂದು ಶಕ್ತಿ ಉಂಟು ಎಂಬ ನಂಬಿಕೆ, ದೃಢವಿಶ್ವಾಸ ಬಂದಾಗ ಗುರು ನಿಮ್ಮಲ್ಲಿಗೆ ಬರ್ತಾನೆ. ನಿಮಗೆ ಅವನನ್ನು ಹುಡುಕಿಕೊಂಡು ಹೋಗ್ಲಿಕ್ಕಾಗೋದಿಲ್ಲ.

ಡಾ। ಸುಧಾ – ಅವರಿಗೆ ಬಹಳಷ್ಟು ಮಂದಿ ಗುರು ಸಿಕ್ಕಿದ್ದಾರಂತೆ. ಆದರೆ ಅವರಿಗೆ ಆ ಗುರುಗಳ ಮೇಲೆ ವಿಶ್ವಾಸ ಬರುವುದಿಲ್ವಂತೆ, ಸಂಶಯ ಬರ್ತದಂತೆ.

ಅಜ್ಜ – ಅವರಿಗೆ ಅವರಲ್ಲಿ ನಂಬಿಕೆ ಇದ್ರೆ ಗುರು ಸಿಕ್ತಾನೆ. ನೋಡಿ. ಭಕ್ತ ಮತ್ತು ಭಗವಂತ. ಭಗವಂತನನ್ನು ಎಲ್ಲಿ ಎಂದು ಹುಡುಕಿಕೊಂಡು ಹೋಗುವುದು. ಭಕ್ತನಿದ್ದಲ್ಲಿಗೆ ಭಗವಂತನು ಬಂದ. ಅ್ಞಂ. ಆ ಭಕ್ತನ ಹೃದಯವನ್ನು ತಿಳಿಯಲಿಕ್ಕೆ ಅವನಿಗೆ ಸಾಧ್ಯತೆ ಉಂಟು. ಅವನಿಗೆ ಮಾತ್ರ ತಿಳೀಲಿಕ್ಕೆ ಸಾಧ್ಯತೆ ಉಂಟು. ಅವನು ಕರೆದ್ರೆ ಬರೋದಿಲ್ಲ. ಕರೆಯದೆ ಬರುವವನು ಭಗವಂತ. ಹಾಗಾದ್ರೆ ಗುರು. ಏನಪ್ಪ ಗುರು ಅಂದ್ರೆ. ಅವ ಯಾವ ರೂಪದಿಂದಲೂ ಬರಬಹುದು. ಅವನಿಗೆ ರೂಪ ಇಂಥಾದ್ದು ಅಂತ್ಹೇಳಿ ಇಲ್ಲ. ಅವರವರ ಯೋಗ್ಯತೆಯನ್ನರಿತು, ಅವರವರ ಮನಸ್ಸನ್ನು ಅರಿತು, ಅವ ಬರ್ತಾನೆ. ಅ್ಞಂ.

ಡಾ। ಸುಧಾ – ಅವರ ಜೀವನದಲ್ಲಿ ಬೇರೆ ಬೇರೆ ಗುರು ಬರ್ಬಹುದಾ ಅಥವಾ ಒಬ್ಬನೇ ಗುರು ಬರ್ತಾನಾ ಅಂತ ಕೇಳ್ತಾರೆ.

ಅಜ್ಜ – ಅದು ಅವ್ರಿಗೆ ಗೊತ್ತಾಗಬೇಕು. ಆ ಗುರು ಯಾರು? ಏನು? ಎಂಬುದು ಅಲ್ಲಿ ಮನಸ್ಸಿಗೆ ಗೋಚರವಾಕ್ತದೆ. ಒಬ್ಬ 'ನಾನು ಗುರು' ಅಂತ ಹೇಳಿದ ಕೂಡಲೇ ಅವ ಗುರು ಆಗೋದಿಲ್ಲ. ಅಲ್ಲವಾ. ನಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರಬೇಕಲ್ಲ. ಆಗ ಅವನಿಗೆ ಗೊತ್ತಾಕ್ತದೆ.

ಡಾ। ಸುಧಾ – ಅವರಿಗೆ ಸಾಧನೆ ಮಾಡ್ಬೇಕಂತೆ. ಆ ಸಾಧನೆ ಅವರಿಗೆ ಸರಿ ಹೋಗ್ಲೀ ಅಂತ ಅವರ ಆಶಯವಂತೆ. ಅದರ ಫಲಿತಾಂಶ ಸರಿಯಾಗಿ ಬೇಕು ಅಂತ. ಒಳಗೆ ದೃಢವಾದ ಸಾಧನೆ ಮಾಡ್ಬೇಕಂತೆ. ಅದು ಸರಿಹೋಕ್ತದೋ ಇಲ್ಲವೋ. ಅದರಲ್ಲಿ ಯಶಸ್ಸು ಸಿಕ್ತದೋ ಇಲ್ಲವೋ ಅಂತ.

ಅಜ್ಜ – ಒಳಗೆ ಒಂದು ಅವ್ಯಕ್ತವಾದ ಶಕ್ತಿ ಇದೆ ಅಂತ್ಹೇಳಿ ಗೊತ್ತುಂಟಾಂತ ಕೇಳಿ.

ಡಾ। ಸುಧಾ – ಅವರು ಏಸುಕ್ರಿಸ್ತನ ಸಾಕಾರ ರೂಪದ ಮೇಲೆ ಧ್ಯಾನ ಮಾಡುತ್ತಾ ಇದ್ರಂತೆ. ಮೇರಿ ಮೇಲೆನೂ ಧ್ಯಾನ ಮಾಡ್ತಿದ್ರಂತೆ. ಆದ್ರೆ ಒಬ್ಬರು ಗುರು ಸಿಕ್ಕಿದವರು ಇವರ ಈ ವಿಚಾರವನ್ನು ಉಪಯೋಗ ಇಲ್ಲಾಂತ್ಹೇಳಿ ಪೂರ್ತಿಯಾಗಿ ಅಳಿಸಿಬಿಟ್ರಂತೆ. ಅದಾದ ಮೇಲೆ ಇವರಿಗೆ ಒಂದು ಗೊಂದಲವಂತೆ ಈಗ ದೇವರ ಕೃಪೆಗೋಸ್ಕರ ಕಾಯಬೇಕಾ, ಇಲ್ಲ ಹ್ಯಾಗೆ. ಯಾವ ಸಾಕಾರ ರೂಪದಲ್ಲಿ ಹಿಂದೆ ಧ್ಯಾನ ಮಾಡ್ತಿದ್ರೋ ಅದು ಈಗ ಇಲ್ಲವಾಗಿದೆಯಂತೆ. ಈಗ ಅವರಿಗೆ ಗೊಂದಲ. ದೇವರ ಕೃಪೆಗಾಗಿ ಇನ್ನು ಕಾಯಬೇಕಾ, ಅಥವಾ . . . .

ಅಜ್ಜ – ಸ್ವಲ್ಪ ಕಾಯಬೇಕು. ಸಾಕಾರದಿಂದ ನಿರಾಕಾರಕ್ಕೆ ಹೋಗುವಂಥಾದ್ದು. ಆ್ಞಂ. ಈಗ ಸಾಕಾರವನ್ನು ತಪ್ಪಿಸಿಬಿಟ್ರು ಅಂತ್ಹೇಳಿ ಆದ್ರೆ ಈ ಅವರಿಗೆ ಅದೂ ಅಲ್ಲ, ಇದೂ ಅಲ್ಲ ಅಂತ್ಹೇಳಿ ಆಗಿದೆ.

ಡಾ। ಸುಧಾ – ಹೌದು ಗೊಂದಲಕ್ಕೆ ಸಿಕ್ಹಿದ್ದಾರೀಗ. ೨ ವರ್ಷ ಆಯ್ತು. ಇನ್ನು ಎಷ್ಟು ವರ್ಷ ಕಾಯಬೇಕು ಅಂತ ಕೇಳ್ತಿದ್ದಾರೆ.

ಅಜ್ಜ – ವರ್ಷದ ಗಣನೆ ಇಲ್ಲ. ಅದು ಒಂದು ಕ್ಷಣ ಕಾದ್ರೂ ಸಾಕು, ಒಂದು ಸೆಕೆಂಡು ಸಾಕು. ಅದು ಮಿಂಚಿನ ಹಾಗೆ ಆಗುವಂಥಾದ್ದು. ಎಷ್ಟು ತೀವ್ರತೆಯಿಂದ ಎಂಬುದು. ನೋಡಿ ಮನಸ್ಸನ್ನು ತಟಸ್ಥಗೊಳಿಸಿ ನೋಡಿ. ಯಾವ ಹೊರಗಿನ ಆಕಾಂಕ್ಷೆಗಳೂ ಇಲ್ಲದೆ. ದೇವರನ್ನು ಕಾಣಬೇಕು ಎಂಬುದೂ ಇಲ್ಲದೆ, ಬರೇ ತಟಸ್ಥಗೊಳಿಸುವಂಥಾದ್ದು ಮನಸ್ಸನು ಅಂದ್ರೆ ಆ ಧ್ಯಾನದಲ್ಲಿ ಒಂದು ಸೆಕೆಂಡು ತಟಸ್ಥಗೊಳಿಸಿದ್ರೆ ಸಾಕು. ಅದು ವರ್ಷಗಟ್ಟಲೆ ಆಗ್ಲಿಕ್ಕೂ ಸಾಕು. ಆ ತೀವ್ರತೆ ಎಷ್ಟು ಉಂಟೋ ಅದರ ಮೇಲೆ ಹೊಂದಿಕೊಂಡುಂಟು. ಆದರೆ ಹೋಗಬೇಕಾದ್ದು ನಿರಾಕಾರಕ್ಕೆ. ಸಾಕಾರದಿಂದ ನಿರಾಕಾರಕ್ಕೆ. ಆ ಸಾಕಾರವೇ ನಿರಾಕಾರಕ್ಕೆ ದಾರಿ ತೋರಿಸ್ತದೆ. ಸಾಕಾರವೇ ಗುರು ರೂಪದಿಂದ ಬರ್ತಾನೆ. ಈ ಗುರುವಿಗೆ ಸಾಕಾರದ ಆದೇಶ ಬೇಕು. ಅವನ ಆದೇಶ ಇಲ್ಲದೆ ಗುರು ಬರೋದಿಲ್ಲ. ಹಾಗಾದ್ರೆ ಈ ಸಾಕಾರದ ಮೇಲೆ ತೀವ್ರತೆಯಿಂದ ಏಕಾಗ್ರಗೊಳಿಸಿದಾಗ (ಮನಸ್ಸನ್ನು), ಯಾವುದೋ ಒಂದು ರೂಪದಿಂದ ಗುರು ಬಂದು ಅವನನ್ನು ಕೊಂಡೋಗುತ್ತಾನೆ. ಮನಸ್ಸಿನ ಮೇಲೆ ಅದು ಪರಿವರ್ತನೆ ಆಗಬೇಕು. ಎಲ್ಲವೂ ನೀನೇ ದೃಢ ನಂಬಿಕೆ, ವಿಶ್ವಾಸದಿಂದ ಇದ್ದಾಗ . . . ಅವ ದಾರಿ ತೋರಿಸ್ತಾನೆ. ಅವನಿಗೆ ಸ್ವತಃ ಬರ್ಲಿಕ್ಕಾಗೋದಿಲ್ಲ. ಅವ ಒಬ್ಬನನ್ನು ಕಳಿಸ್ತಾನೆ. ಆ ಗುರುವಿಗೂ ಅವನಿಗೂ ಸ್ವಲ್ಪ ವ್ಯತ್ಯಾಸ ಉಂಟು ಅಷ್ಟೇ. ಬಾಹ್ಯರೂಪದಲ್ಲಿ ಗುರು ಬಂದ್ರೆ ಆಂತರ್ಯದಲ್ಲಿ ಅವನು, ಇವನು (ಗುರು) ದಾರಿ ಸೋರಿಸ್ಬಹುದು. ಅವನಲ್ಲಿಗೆ ಹೋಗ್ಲಿಕ್ಕೆ ಹೀಗೆ ಹೋಗು ಅಂತ. ಆದ್ರೆ ಅರ್ಹತೆಯನ್ನು ಪಡೀಬೇಕಲ್ಲ. ಆ ಅರ್ಹತೆಯನ್ನು ಪಡ್ದಾಗ ಅಲ್ಲಿ ಗುರು ನೋಡ್ತಾನೆ. ಅವ ಏನು ಮಾಡೋದಿಲ್ಲ. ಅವ ಆಶೀರ್ವಾದ ಕೊಡೋದಿಲ್ಲ. ಏನೂ ಮಾಡೋದಿಲ್ಲ. ಅವನಿಗೇನು ಕಾವಿ ಬಟ್ಟೆ ಇಲ್ಲ. ಕಿರೀಟ ಇಲ್ಲ. ಅದಿಲ್ಲ, ಇದಿಲ್ಲ. ಅವ ಹ್ಯಾಗಿರ್ತಾನೆ. ಅವನ ಮನಸ್ಸನ್ನು ನೋಡಿ ಆ ಮನಸ್ಸಿನ ಮೇಲೆ ಪರಿಣಾಮ ಮಾಡ್ತಾನೆ. ಬರೇ ಒಂದು ದೃಷ್ಟಿ ಅಷ್ಟೆ. ಹಾಗಾದ್ರೆ ಅವರವರ ಮನಸ್ಸನ್ನು ಅರಿತು, ಅವರವರ ಯೋಗ್ಯತೆಯನ್ನು ಅರಿತು. ಆಂ. ಅವ ಕೆಲಸ ಮಾಡ್ತಾನೆ. ಮನಸ್ಸಿಗಲ್ಲಿ ಅರಿವು ಕೊಟ್ಟು ಹೋಕ್ತನೆ. ಅವ ಮಾಡೋದು ಅಷ್ಟೇ. ಅವ ಆ ಒಳಗೆ ಗುರುವನ್ನು ತೋರಿಸಿಕೊಡ್ತಾನೆ. ಇದೆಲ್ಲ ಒಂದು ನಿಮಿಷದಲ್ಲಾಗುವಂಥಾದ್ದು. ಆದ್ರು ಅದಕ್ಕೆ ಎಷ್ಟೋ ಸಮಯ ಬೇಕಾಕ್ತದೆ. ಹಾಗೆ ಬಂದುಽಽ ಬಂದುಽಽ ಮೊನ್ನೆ ಏನೋ ಹೇಳಿದ್ರಲ್ಲಪ್ಪ. ಕಲ್ಲು ಹೊಡಿಬೇಕಾದ್ರೆ, ಪೆಟ್ಟು ಕೊಟ್ಟು ಕೊಟ್ಟು ಆಖೇರಿಎಗೆ ಒಂದು ಪೆಟ್ಟಿನಲ್ಲಿ ಅದು ಸ್ಫೋಟವಾಯಿತು ಅಂತ್ಹೇಳಿ. ಆದ್ರೆ ಅದು ಒಂದು ಪೆಟ್ಟಿನಲ್ಲಿ ಆದದ್ದಲ್ಲ. ಹಿಂದಿನ ಪೆಟ್ಟುಗಳ ಪರಿಣಾಮದಿಂದ

ಕೊನೆಯ ಒಂದ್ರಲ್ಲಿ ಆಯಿತು. ಹಾಗಾಗಿ ನೀವು ಎಷ್ಟೋ ಗುರುಗಳನ್ನ ಕಂಡಿದ್ದೀರ. ಅದರ ಆಧಾರದ ಮೇಲೆ ಯಾರೋ ಒಬ್ಬನಿಂದ ಸ್ಫೋಟ ಆಗ್ಲಿಕ್ಕೂ ಸಾಕು. ಆಂ. ಅರ್ಥಾಗ್ಲಿಲ್ವಾ. ನೋಡಿ ಆ ಗುರುವನ್ನು ನಾನು ಕಾಣಬೇಕು, ಅವ ಸಿಕ್ಕಬೇಕು ಎಂಬ ಆಕಾಂಕ್ಷೆ ಇದ್ದ ಕಾರಣ ಅನೇಕ ಗುರುಗಳು ಸಿಕ್ತಾ ಇದ್ದಾರೆ. ಅಂಥಾ ನಿಜವಾದ ಆಕಾಂಕ್ಷೆ ಇದೇ ಅಂತ್ಹೇಳಿ ಆದ್ರೆ ಒಬ್ಬನಿಂದ (ಗುರು) ಪೆಟ್ಟು ಬೀಳ್ತದೆ. ಅದು ಯಾರು? ಯಾವಾಗ ಏನು? ಅಂತ್ಹೇಳ್ಳಿಕ್ಕೆ ಬರೋದಿಲ್ಲ. ಅವರ ಮೇಲೆ ಗಮನ ಇಡುವುದೂ ಬೇಡ. ಯಾವನು ಯಾವುದನ್ನು ಹುಡುಕಿತ್ತಾನೋ ಅದು ಅವನಿಗೆ ದೊರೆಯುತ್ತದೆ. ಆಂ. ಹುಡುಕುವವನಿಗೆ ದೊರಕುತ್ತದೆ. ಏಸುಕ್ರಿಸ್ತ ಏನ್ಹೇಳ್ತಾನೆ. ಬಾಗಿಲನ್ನು ತಟ್ಟಿ ಅಂತ ಹೇಳ್ತಾನೆ. ಆ್ಞಂ. ಬಾಗಿಲನ್ನು ತೆರೆಯುವಂಥಾದ್ದು ಮಾತ್ರ ನಮ್ಮ ಕೆಲಸ. ಆಂ. ಇದು ಕರ್ಮ ವಿಭಾಗ. 'I am that' ಹೇಳಪ್ಪ ಅದೇನು. I am that ಹಾಗಂದ್ರೆ ಇದು ದೃಢ ನಂಬಿಕೆ ವಿಶ್ವಾಸ ಬಂದರೆ ನೋಡಿ. ಗುರು ಎಲ್ಲಿದ್ದಾನೆ? ಅಲ್ಲಿಯೇ ಇದ್ದಾನೆ. ಅದ್ರಲ್ಲಿ ದೃಢ ಮನಸ್ಸು, ಧೈರ್ಯದಿಂದ ಇಟ್ರಾಯಿತು.

ಡಾ। ಸುಧಾ – ಆತ್ಮ ಸಾಕ್ಷಾತ್ಕಾರವೇ ಮನುಷ್ಯನ ಉದ್ದೇಶ ಅಂತ್ಹೇಳಿ ಅವರಿಗೆ ಚನ್ನಾಗಿ ಗೊತ್ತಂತೆ. ಆದರೆ ಎಲ್ಲಿ ಇದ್ದುಕೊಂಡು ಮಾಡ್ಬೇಕು. ಏನು ಮಾಡ್ಬೇಕು ಅಂತ ಗೊತ್ತಿಲ್ವಂತೆ. ಏನು ಮಾಡ್ಲಿಕ್ಕೋದ್ರೂ ಅದು ಸರಿ ಅಲ್ಲ ಅನ್ನಿಸ್ತದಂತೆ. ಅದಕ್ಕೆ ನಾನು ಏನು ಮಾಡ್ಬೇಕು ಅಂತ ಕೇಳ್ತಾ ಇದ್ದಾರೆ.

ಅಜ್ಜ – ಅವರು ಏನು ಕೆಲಸದಲ್ಲಿದ್ದಾರೀಗ ಏನು ವಿಚಾರದಲ್ಲಿದ್ದಾರೆ.

ಡಾ। ಸುಧಾ – ಇವರು ರೇಖಿ, ಪ್ರಾಣಿಕ್ ಹೀಲಿಂಗ್ ಆಥರದ್ದೆಲ್ಲ ಮಾಡ್ತಾರಂತೆ. ಒಂದು ದೃಢವಾದದ್ದನ್ನೇನೂ ಮಾಡ್ತಾ ಇಲ್ವಂತೆ. ಅದೂ ಇದೂ ಮಾಡ್ತಾ ಇದ್ದಾರಂತೆ. ಅಂದ್ರೆ ಅವರಿಗೆ ದೇವರ ಶಕ್ತಿ ಕಲೆಯ ರೂಪದಲ್ಲಿ ಬಂದು ಮನುಷ್ಯರಿಗೆ ಉಪಯೋಗ ಆಗುವಂಥಾದ್ದನ್ನ ಮಾಡಬೇಕಂತೆ.

ಅಜ್ಜ – ಅಂದ್ರೆ ಸೇವೆ.

ಡಾ। ಸುಧಾ – ಹೌದು. ಅಂದ್ರೆ ಅವರಿಗೆ ಇನ್ನೊಬ್ಬರ ಸೇವೆ ಮಾಡಬೇಕೂಂತನೂ ಇಷ್ಟ ಇದಿಯಂತೆ. ಮದರ್ ತೆರೇಸಾ ತರ ಸೇವೆ ಮಾಡ್ಲಿಕ್ಕೆ ಸಾಧ್ಯವಿಲ್ಲಂತೆ. ಏನು ಮಾಡಬೇಕೂಂತ ಅವರ ಪ್ರಶ್ನೆ.

ಅಜ್ಜ – ಸೇವಾ ಕಾರ್ಯ ಬಹಳ ಒಳ್ಳೇದು. ಆದ್ರೆ 'ನಾನು ಯಾರು'? ಎಂಬ ಅರಿವಾಗುವಂಥಾದ್ದೆ ಬಹಳ ಪ್ರಾಮುಖ್ಯ ಕಾಣ್ತದೆ ನಮಗೆ. ತಾನು ಯಾರು? ಈಗ ಸೇವ ಮಾಡ್ತೇನೆ ನಾನು ಯಾರು? ಯಾರು ಮಾಡೋದು? ನಾನು ಮಾಡುವಂಥಾದ್ದು ಅಲ್ವಾ. ಯಾವುದೇ ಒಂದು ಸೇವಾ ಕರ್ಮವಾದ್ರೂ ಯಾರು ಮಾಡೋದು? ನಾನು. ಈ ನಾನು ಎಂಬುದರ ಅರಿವಾಗುವಂಥಾದ್ದೆ ಪ್ರಾಮುಖ್ಯ. ಇದು ತಟಸ್ಥ ಭಾವನೆಯಿಂದ ಸಾಧ್ಯತೆ ಉಂಟು. ಯಾವ ಆಸೆ ಆಕಾಂಕ್ಷೆಗಳನ್ನು ಬಿಟ್ಟು, ಬರೇ . . . . ಕರ್ತವ್ಯ ದೃಷ್ಟಿಯಿಂದ ಕರ್ಮವನ್ನು ಮಾಡುತ್ತಾ ಇರ್ಲಿ. ಅದುವೇ ಸೇವೆ. ಆ ಕರ್ತವ್ಯ ದೃಷ್ಟಿಯಿಂದ ಮಾಡುವಂಥಾದ್ದು. ಕರ್ತವ್ಯ ಅಂದ್ರೇನು. ತಾನು ಮಾಡಲೇ ಬೇಕಾಂದಂಥಾದ್ದು. ಯಾರು ಮಾಡುವವನು? ನಾನು. ನಾನು ಯಾರು? ಹಾಗಾದರೆ ಈ ಇರುವವನಿಗೆ ಈ ಇರುವವನ ಅರಿವಾದಾಗ ಸಾಕ್ಷಾತ್ಕಾರಕ್ಕೆ ಹೋಗ್ತದೆ. ಸಾಕ್ಷಾತ್ಕಾರವೇ ನಮ್ಮ ಗುರಿ. ಇಲ್ಲೊಬ್ಬ ಇದ್ದಾನಲ್ಲ (ಹೃದಯವನ್ನು ತೋರಿಸುತ್ತಾ) ಅವನಿಗೆ ಅವನ ಅರಿವಾಗಬೇಕು. ಅರಿವಾದಾಗ, ಅವನ ಅಸ್ತಿತ್ವ ಇಲ್ಲದೇ ಆದಾಗ ಸಾಕ್ಷಾತ್ಕಾರ. ಇದು ತಟಸ್ಥ ಭಾವನೆಯಿಂದ ಆಗುವಂಥಾದ್ದು. ಅವ ಯಾವ ಯಾವ ಕೆಲಸ ಮಾಡ್ತಾರೋ ಅದನ್ನು ನಿಷ್ಕಾಮದಿಂದ ಮಾಡುತ್ತಾ ಇರ್ಲಿ. ಬರೇ ತಟಸ್ಥ ಭಾವನೆಯಿಂದ ಇದ್ದುಬಿಟ್ರೆ ಆಯಿತು. ಅಲ್ವಾ. ಅಂದ್ರೆ ಅದುವೇ ಸೇವೆ. ಅದರಲ್ಲಿ ಯಾವ ಆಸೆ ಆಕಾಂಕ್ಷೆಗಳೂ ಇಲ್ಲ. ನಾನು ಮಾಡುತ್ತೇನೆ ಎಂಬ ಭಾವನೆಯೂ ಇಲ್ಲ. ಆಂ. 'ನಾನು ಮಾಡುತ್ತೇನೆ' ಎಂಬ ಭಾವನೆ ಇಲ್ಲದೆ ಕರ್ಮಗಳನ್ನು ಮಾಡುವಂಥಾದ್ದು ತಟಸ್ಥ. ಎಲ್ಲವೂ ನೀನೇ, ಹಾಗಾದ್ರೆ ಈ ಆಸೆ ಆಕಾಂಕ್ಷೆಗಳೆಲ್ಲ ಹೋಯಿತು. ಅದು ಸೇವೆ. ನಿಜವಾದ ಸೇವೆ ಅದು. ಅವನು ಮಾಡಿಸ್ತಾನೆ. ಅವನೇ ಈ ದೇಹದಲ್ಲಿದ್ದುಕೊಂಡು, ಈ ದೇಹದ ಮೂಲಕ ಮಾಡಿಸ್ತಾನೆ. ಅಲ್ಲಿ ಸೇವಾಮನೋಭಾವನೆ ಕೂಡ ಇಲ್ಲ. ಅವನು ಕರ್ತವ್ಯದೃಷ್ಟಿಯಿಂದ ಉತ್ತಮವಾದ ಕೆಲಸಗಳನ್ನು ಮಾಡುತ್ತಾನೆ. ಜನರಿಗೆ ಪ್ರಯೋಜನ ಆಗುವಂಥಾದ್ದು. ಇದಕ್ಕೆ ಒಳಗೊಬ್ಬ ಇದ್ದಾನೆಂಬ ದೃಢ ನಂಬಿಕೆ ವಿಶ್ವಾಸವೇ ಕಾರಣ. ಭಾವನಾತೀತನಾಗಿ ಕರ್ಮಗಳನ್ನು ಮಾಡುವಂಥಾದ್ದು. ಆ ವಿಶ್ವಾಸ ನಂಬಿಕೆಯೇ ಅವನನ್ನು ಕೊಂಡುಹೋಗುವಂಥಾದ್ದು. ಇದಕ್ಕೆ ಬಾಹ್ಯ ವಿಚಾರಗಳಲ್ಲಿರುವ ಆ ಮನಸ್ಸನ್ನು ತನ್ನ ಮೂಲ ಸ್ಥಾನದಲ್ಲಿ ಕೇಂದ್ರೀಕರಿಸಿ ತಟಸ್ಥಗೊಳಿಸುವುದು. ಅಂದ್ರೆ ಇದು ದೊಡ್ಡ ಧ್ಯಾನ. ಆಂ.

ಡಾ। ಸುಧಾ – ಎಲ್ಲಿ ಹೋಗ್ಬೇಕು, ಏನ್ ಮಾಡ್ಬೇಕು ಅಂತ ನೀವು ಹೇಳೋದಿಲ್ವಾ ಅಂತಿದ್ದಾರೆ ಅಜ್ಜ.

ಅಜ್ಜ – ಎಲ್ಲಿಗೆ ಹೋಗೋದು ಬೇಡ. ಈಗ ಇದ್ದಲ್ಲೇ ಇದ್ರೆ ಆಯ್ತು. ಎಲ್ಲಿಗೆ ಹೋದ್ರು ಹೋದಲ್ಲಿ ಸಿಕ್ಕೊದಿಲ್ಲ. ಒಂದು ಕಡೆಗೆ ಹೋದ್ರೆ ಸಿಕ್ಕುದಿಲ್ಲ. ಹಾಗಾದ್ರೆ ಇದ್ದಲ್ಲಿಯೇ ಇದ್ದುಕೊಂಡು ಆಗುವಂಥಾದ್ದು. ಎಲ್ಲಿ ಹೋದ್ರು ದೇಹ ಉಂಟು. ಸಂಸಾರ ಉಂಟು. ಸಂಸಾರದಲ್ಲಿದ್ದುಕೊಂಡು ಆಗುವಂಥಾದ್ದು. ನಾನು ದೇಹವಲ್ಲ. ದೇಹದಲ್ಲಿರುವವನು ಎಂಬ ಭಾವನೆ, ದೃಢ ನಂಬಿಕೆ ವಿಶ್ವಾಸ ಬಂದುಬಿಟ್ರೆ ಆಯ್ತು. ಅದೇ ಸಾಕು. ಎಲ್ಲಿಗೆ ಹೋಗೋದು. ಎಲ್ಲಿಗೆ ಬರೋದು. ಎಲ್ಲಿಗೋದ್ರು ಹೀಗೇ ಅಲ್ವಾ. ಎಲ್ಲಿಗೋಗೋದಪ್ಪಾ. ಎಲ್ಲಿಗೋದ್ರು ಹೀಗೇ ಅಲ್ವಾ. ಈಗ ಹಿಮಾಲಯಕ್ಕೆ ಹೋಗಿ ತಪಸ್ಸು ಮಾಡ್ತಾರೆ. ಹಿಮಾಲಯಕ್ಕೊದ್ರೂ ಕೂಡ ಇದೇ ಸ್ಥಾನ. ಹಾಗಾದ್ರೆ ನಾವು ಇದ್ದಲ್ಲಿಯೇ ಇದ್ದುಕೊಂಡು, ದೃಢ ನಂಬಿಕೆ ವಿಶ್ವಾಸ ಬಂದುಬಿಟ್ರೆ, ಅಂದರೆ ಅವ ಒಬ್ಬ ಇದ್ದಾನೆ ಅಂತ್ಹೇಳಿ ಬಂದುಬಿಟ್ರೆ ಆಯ್ತು. ಅಂದ್ರೆ ನಮ್ಮ ನಮ್ಮ ಪರಿಚಯ ಮಾಡಿಕೊಳ್ಳುವಂಥಾದ್ದೆ ಸಾಕ್ಷಾತ್ಕಾರಕ್ಕೆ ಹೋಗುವ ದಾರಿ. ನಮ್ಮ ನಮ್ಮ ಪರಿಚಯ ಮಾಡಿಕೊಳ್ಳುವಂಥಾದ್ದೆ. ಅಂದ್ರೆ ದೇಹದಲ್ಲಿರುವವನಿಗೆ ತನ್ನ ಇರುವಿಕೆಯ ಅರಿವಾದಾಗ ಅವನ ಅಸ್ತಿತ್ವ ಹೋದಾಗ ಸಾಕ್ಷಾತ್ಕಾರ. ಇದು ದೇಹದಲ್ಲಿ ಇದ್ದುಕೊಂಡೆ ಆಗುವಂಥಾದ್ದು. ಇದು ಹಿಮಾಲಯಕ್ಕೆ ಹೋದ್ರು ಒಂದೇ. ಬೆಂಗಳೂರು ಒಂದೆ. ಮೈಸೂರು ಒಂದೆ. ಅಮೇರಿಕಾವು ಒಂದೆ. ಯೂರೋಪ ಒಂದೆ. ಎಲ್ಲಿದ್ರೂ ಅಗ್ಲಿಕ್ಕೆ ಸಾಧ್ಯತೆ ಉಂಟು. ಹೋಗುವಂಥಾದ್ದು ಬರುವಂಥಾದ್ದೆಲ್ಲ ನಮ್ಮ ಒಂದು ಮನೋ ಭಾವನೆ ಅಷ್ಟೆ. ಮನೋ ಭಾವನೆ ಹೋದಾಗ ಅವ ಇಲ್ಲಿದ್ರೆ . ಅಮೇರಿಕದಲ್ಲಿದ್ದ ಹಾಗೆ. ಆಂ. ಏನು ಗೊತ್ತಾಯ್ತಾ.

ಡಾ। ಸುಧಾ – ಅರ್ಥಾಯ್ತಿಂತಂತೆ ನೀವು ಹೇಳಿದ್ದು.

ಅಜ್ಜ – ಅಂದ್ರೆ ನಾವು ನೆಗೆಟಿವ್ ಚಿತ್ರ ಕೊಡ್ತದೆ. ಅದನ್ನು ಪಾಸಿಟೀವ್ ಮಾಡಿಕೊಂಡಾಗ ಅರ್ಥ ಆಕ್ತದೆ. ನಾವು ಸಂಪೂರ್ಣ ಹೇಳೋದಿಲ್ಲ. ಅವರ ಮನಸಿಗೆ ಅದು ಅರ್ಥವಾಗ್ಬೇಕು.

ಡಾ। ಸುಧಾ – ನಮ್ಮ ಈ ಅಭ್ಯಾಸಗಳನ್ನ ಹೇಗೆ ತಪ್ಪಿಸುವುದು.

ಅಜ್ಜ – ಅದು ಅದರ ಪಾಡಿಗೆ ಇರ್ಲಿ. ಅದರ ಕಡೆಗೆ ನಾವು ಗಮನ ಕೊಡೋದೇ ಬ್ಯಾಡ. ಏನು ಆಲೋಚನೆ ಮಾಡೋದೇ ಬ್ಯಾಡ. ದೃಢ ನಂಬಿಕೆ ವಿಶ್ವಾಸ ಒಂದೇ. ಏನು.

ಡಾ। ಸುಧಾ – ನನಗೆ I am that ಒಳಗಿದ್ದವನು ನಾನೆ ಎಂದು ಗೊತ್ತಾದ್ರೆ ನನಗೆ ಗುರುವಿನ ಅಗತ್ಯವೇ ಇಲ್ಲವಲ್ಲಾ ಅಂತಾರೆ. ಆವಾಗ ಗುರು ಯಾಕೆ ಬೇಕು ಅಂತ ಕೇಳ್ತಾರೆ.

ಅಜ್ಜ – ಅದು ಅರ್ಥ ಆದ್ರೆ.

ಡಾ। ಸುಧಾ – ಹೌದು.

ಅಜ್ಜ – ಅದೇ ಆಗಬೇಕಾದ್ದೀಗ. ಅದೇ ಆಗಬೇಕು. ನೋಡಿ ಅದು ಒಂದು ಮಾದರಿ ರೂಪವಾಗಿ ನಿಲ್ಲುವಂತಾಗಲಿ. ಅದು ನಮಗೂ ಆಯ್ತು, ಜಗತ್ತಿಗೂ, ಇನ್ನೊಬ್ಬರಿಗೂ ಆಯ್ತು. ಇದು ಸೇವೆ ಅಂದ್ರೆ. ನೀವು ಬರೀ ಹೀಗೆ ಕೂತ್ಕೋಬೇಕು ನೋಡಿ. ನೀವು 'ಏನು ಸೇವೆ' ಎಂದಾಗ ಹೀಗೆ ಕೂತ್ಕೋಬೇಕು. ಅದು ಸೇವೆಯಲ್ಲಿ ಕೂಡ್ಹೋಗ್ತದೆ.

ಡಾ। ಸುಧಾ – ಇನ್ನೊಬ್ಬರು ನೋಡಿ ಕಲೀಲಿಕ್ಕೆ ಶುರುಮಾಡ್ತಾರೆ.

ಅಜ್ಜ – ನಾವು ಮಾದರಿ ರೂಪವಾಗ್ಬೇಕು. ಅದು ಸೇವೆ ಅದು. ನಮ್ಮಿಂದ ಅವರು ಪಾಠವನ್ನು ಕಲೀತಾರೆ. ಅದು ಸೇವೆ. ನಾವು ಬಾಹ್ಯ ಕೈಗಳಿಂದ ಇಂದ್ರಿಯಗಳಿಂದ ಸೇವೆ ಮಾಡೋದು ಸೇವೆ ಅಂತ ನಾವು ಹೇಳೋದಿಲ್ಲಪ್ಪ. ಅದು ಯಾರಿಗೂ ಮಾಡ್ಬೋದು. ಒಂದು ಆಸ್ಪತ್ರೆಯಲ್ಲಿ ಸೇವಕರು ಎಷ್ಟೋ ಜನ ಇದ್ದಾರೆ ಈಗ. ಅವರು ಸೇವೆ ಮಾಡ್ತಾರೆ. ಇದಲ್ಲ. ಇದು ದೊಡ್ಡ ಸೇವೆ ಇದು. ಯಾವುದು? ನೋಡಿ ಈ ದೊಡ್ಡ ಸೇವೆ ಯಾವುದು? ಆಸ್ಪತ್ರೆ, ಅಲ್ಲಿ, ಇಲ್ಲಿ ಸೇವೆ ಮಾಡೋದು ಲೆಕ್ಕ ಇಲ್ಲ. ಇದು ಇಡೀ ಜಗತ್ತಿಗೆ ಇವ ಕೊಡ್ತಾನೆ. ಇದಕ್ಕೆ ಏಸುಕ್ರಿಸ್ತನ ಉದಾಹರಣೆ ನೋಡಿ. ಅವನ ಅಂತ್ಯಕಾಲದಲ್ಲಿ ಅವ ಏನೆಲ್ಲಾ ಮಾಡಿದ. ಅವ ಜಗತ್ತಿಗೆ ಕೊಟ್ಟ ಸಂದೇಶ ಅದು. ಎಲ್ಲ ಸಹನೆಯಿಂದ ಅದನ್ನು

ಸ್ವೀಕಾರ ಮಾಡಿ. ಮಾದರಿ ರೂಪವಾಗಿ ನಾವು ಎಲ್ಲವನ್ನೂ ಸ್ವೀಕಾರ ಮಾಡಿಕೊಂಡು ತಟಸ್ಥ ಭಾವನೆಯಿಂದ – ಅದು ದೊಡ್ಡ ಸೇವೆ. ಅದರಿಂದ ಸೇವೆಯು ಸಂಭವಿಸುತ್ತದೆ. ಅವನಿಂದ ಅವರು ಇಂದ್ರಿಯಗಳ ಮೂಲಕ ಯಾವ ಸೇವೆಯನ್ನೂ ಮಾಡುವುದು ಬೇಡವೆಂದು ಹೇಳಿಬಿಡಪ್ಪ. ಇಂದ್ರಿಯಗಳ ಮೂಲಕ ಮಾಡುವ ಸೇವೆ ಅದು ಸೇವೆಯೇ ಅಲ್ಲ. ಅವನು ಬರೇ ಹ್ಞಾಂ! ಇದು ಸೇವೆ. ಅವನಿಂದ ನೂರಾರು ಜನ ಪಾಠ ಕಲಿತುಬಿಟ್ರು. ಸಾವಿರಾರು ಜನ ಪಾಠ ಕಲಿತುಬಿಟ್ರು. ಏಸುಕ್ರಿಸ್ತನಿಂದ ಇಡೀ ಜಗತ್ತೇ ಪಾಠ ಕಲೀತದೆ. ಅಲ್ವ? ಮೊದಲು ಅವ ಆದ. ಆ್ಞಂ! ಅದು ಇವತ್ತು ಅವ. ಹಾಗೆ ನಾವು ನಮ್ಮನ್ನು ನಾವು ಅರಿತುಕೊಳ್ಳುವಂಥದ್ದು. ವಿದ್ಯಾರ್ಥಿಯೂ ಉಪಾಧ್ಯಾಯನಾಗುತ್ತಾನೆ. ಹಾಗಾದರೆ ಯಾರು ಗುರು? ಯಾರು ಶಿಷ್ಯ? ಶಿಷ್ಯನು ಗುರುವಿನ ಸ್ಥಾನಕ್ಕೆ ಬರ್ತಾನೆ. ಅದು ಬರಬೇಕಾದ್ದು. ಧ್ಯಾನ ಮಾಡುವವನು ಮಾಡಲ್ಪಡುವವನೇ ಆಗ್ತಾನೆ. ಜೀವಾತ್ಮನು ಪರಮಾತ್ಮನೇ ಆಗುತ್ತಾನೆ. ಇದೆಲ್ಲಾ ದೃಢ ನಂಬಿಕೆ ವಿಶ್ವಾಸದಿಂದ ಆಗುವಂಥಾದ್ದು. ಅವ ಇದ್ದಾನೆ ಅಂತ ಹೇಳಿ ಅವನಿಂದ ಸೇವಾಕಾರ್ಯವು ಜಗತ್ತಿಗೆ ಆಗುತ್ತದೆ. ಅದು ಹಾಗಾದರೆ ಆಡಂಬರದ ಸೇವೆಯಾಯ್ತು. ಸಂಕಲ್ಪ ಇರ್ತದೆ. ಅದು ಆತ್ಮಸಾಕ್ಷಿ. ನೋಡಿ ತನ್ನ ಗುರಿಯನ್ನು – ಗುರಿಯೂ ಆಯ್ತು ಸೇವೆಯೂ ಆಯ್ತು. ಆ ಗುರಿ ತಲುಪಿದವನಿಗೆ ಸೇವೆ ಮಾಡಲಿಕ್ಕೆ ಅರ್ಹತೆ ಬರ್ತದೆ. ಇಲ್ಲವಾದರೆ ಯಾವುದಾದರೂ ಹೆಸರು, ಕೀರ್ತಿ, ಆಕಾಂಕ್ಷೆ ಉಂಟೇ ಉಂಟು – ಯಾವ ಸೇವಾಕಾರ್ಯದಲ್ಲಿ ಆದರೂ ನೋಡಿ. ಅವನಿಂದ ಜಗತ್ತಿಗೇ ಸೇವೆ ಆಗಲಿಕ್ಕೆ ಸಾಧ್ಯತೆಯುಂಟು. ಅವನಿಂದ ಜಗತ್ತಿಗೇ ಸೇವೆ. ಮಾನವ ಜನಾಂಗಕ್ಕೆಲ್ಲ ಒಟ್ಟು ಅವನಿಂದ ಸೇವೆಯು ಸಂಭವಿಸುತ್ತದೆ. ಮೊದಲು ಅವನು ಮಾಡ್ಬೇಕಾದ್ದೇನು? ಏನ್ಮಾಡ್ಬೇಕು? ನಮ್ಮನ್ನು ನಾವು ಅರಿತುಕೊಂಡಾಗ, ಜಗತ್ತನ್ನು ಅರಿತುಕೊಳ್ಳಲಿಕ್ಕೆ ಸಾಧ್ಯ ಉಂಟು. ಸೇವೆ ಅಲ್ಲಿಂದ, ನಿಜವಾದ ಸೇವೆ ಅದು. ಅದು ಅಂದ್ರೆ ಆ ಜೀವಾತ್ಮನು ಬಂಧನದಿಂದ ಬಿಡುಗಡೆ ಹೊಂದಿ ಸ್ವತಂತ್ರನಾಗುವಂಥದ್ದಕ್ಕೆ ಬೇಕಾದ ಅನುಕೂಲತೆಗಳನ್ನು ವ್ಯಕ್ತಪಡಿಸುವಂಥದ್ದೇ ಸೇವೆ. ಆ್ಞಂ! ಅಲ್ವಾ? ಅದಕ್ಕೆ ಮೊದಲು ಅವ ಆಗಬೇಕಪ್ಪ. ಅವನು ಆಗಿಬಿಟ್ಟು – ಬರೇ ದೃಢ ನಂಬಿಕೆ, ವಿಶ್ವಾಸ ಒಂದೇ ಎಲ್ಲವೂ ನೀನೇ, ನಿನ್ನ ಹೊರತು ನಾನು ಇಲ್ಲ. ನಿನ್ನ ಹೊರತು ನಾನು ಇಲ್ಲ. ಎಲ್ಲವೂ ನೀನೇ ಅಂತ ಹೇಳುವಾಗ ಇದು ಕೂಡ – ನಾನು ಕೂಡ ನೀನೇ ಅಲ್ಲವಾ? ಆ್ಞಂ! ಇದು ದೃಢ ನಂಬಿಕೆ, ವಿಶ್ವಾಸ ಬಂದುಬಿಟ್ರೆ ಅವನು ಯಾವುದೋ ಒಂದು ರೂಪದಲ್ಲಿ ಜಗತ್ತಿನ ಮಧ್ಯೆ ಚಲಿಸುವಂಥಾದ್ದು. ಅವನು ಬಂಧನದಲ್ಲಿದ್ದಾನೆ, ಅವನನ್ನು ಬಂಧನದಿಂದ ಬಿಡಿಸಿದಾಗ ನೋಡಿ ಇವನಿಂದ ಸೇವೆ ಸಾಧ್ಯ. ಜಗತ್ತಿಗೆ ಸೇವೆ ಅದು. ಅದು ಸೇವೆ ನಿಜವಾಗ್ಲೂ. ಈಗ ಏಸುಕ್ರಿಸ್ತ ಅದು ಇದು ಹೇಳ್ತಾರೆ, ಕೃಷ್ಣ ಅಂತ ಹೇಳ್ತಾರೆ, ರಾಮ ಅಂತ ಹೇಳ್ತಾರೆ, ಯಾರೇ ಆಗಲಿ, ರಾಮನೋ, ಕೃಷ್ಣನೋ, ಏಸುವೋ ಅವರು ಎಲ್ಲ ಮಾದರೀ ರೂಪವಾಗಿ ಇವತ್ತೂ ಸೇವೆ ನಡೀತಾ ಉಂಟು ಜಗತ್ತಿಗೆ. ನಿಜವಾದ ಸೇವೆ ಅದು. ದೇಹಕ್ಕೆ ಬೇಕಾದ ಸೇವೆಯೂ ಉಂಟು ಇಲ್ಲಿ. ಜೀವಾತ್ಮನಿಗೆ ಬೇಕಾದ ಸೇವೆ. ಅವನನ್ನು ಆವರಣದಿಂದ ಬಿಡುಗಡೆಗೊಳಿಸುವಂಥಾದ್ದು ನಿಜವಾದ ಸೇವೆ. ಅವನು ಬಂಧನದಿಂದ ಬಿಡುಗಡೆ ಆದಾಗ – ದೇಹಕ್ಕೆ ರೋಗ ಬಂದಾಗ ಇದಕ್ಕೆ ಸೇವೆ ಮಾಡುವವರಿದ್ದಾರೆ. ಇದು ದೇಹಕ್ಕೆ ಸಂಬಂಧಪಟ್ಟದ್ದು. ಈಗ ಜೀವಾತ್ಮ ಅಂದ್ರೆ ಆತ್ಮಕ್ಕೆ ಸಂಬಂಧಪಟ್ಟ ವಿಚಾರವಾದ್ದರಿಂದ – ಅದರ ಸೇವೆ ಅಂದ್ರೆ ಅವನನ್ನು ಬಿಡುಗಡೆಗೊಳುಸುವಂಥಾದ್ದು. ಅದಕ್ಕೆ ತಾನು ಮೊದಲು ಆಗಬೇಕು. ದೃಢ ನಂಬಿಕೆ, ವಿಶ್ವಾಸ – ಒಬ್ಬ ಇದ್ದಾನೆ ಎಂಬ ದೃಢ ನಂಬಿಕೆ, ವಿಶ್ವಾಸ ಬಂದರೆ, ಎಲ್ಲವೂ ನೀನೆ ಬಿಟ್ಟುಬಿಡು. ಮುಗೀತು. ಎಲ್ಲವೂ ನೀನೇ. ಅವನಿಂದ ಸೇವಾಕಾರ್ಯ ಆಗುವಂಥಾದ್ದು. ಹಾಗಾದರೆ ಈಗ ಮಾಡುವ ಸೇವೆಯೂ ಕೂಡ ನಿಷ್ಕಾಮದಿಂದ, ಅವನೇ ನನ್ನಿಂದ ಮಾಡಿಸ್ತಾನೆ ಎಂಬ ಭಾವನೆ ಬಂದರೆ ಮುಗೀತು. ಇದು ತಟಸ್ಥದಿಂದ ಹೋಗುವ ದಾರಿ. ಈ ಸೇವಾಕಾರ್ಯದಿಂದ ಅದಾಗಲಿಕ್ಕೂ ಸಾಧ್ಯ. ಇದನ್ನು ಹ್ಯಾಗೆ ವಿವರಣೆ ಮಾಡಿ ಹೇಳ್ತೀರೋ ನಮಗೆ ಗೊತ್ತಾಗೋದಿಲ್ಲ.

ಡಾ। ಸುಧಾ – ದೇಹದ ಮೂಲಕ ಮಾಡುವ ಸೇವೆಯಲ್ಲಿ ಅವರಿಗೆ ಸ್ವಲ್ಪವೂ ಶಾಂತಿನೇ ಸಿಗೋದಿಲ್ವಂತೆ. ಇನ್ನೂ ಮಾಡ್ಬೇಕು, ಇನ್ನೂ ಸರಿಯಿಲ್ಲ ಅನ್ನಿಸ್ತದಂತೆ ಅವರಿಗೆ.

ಅಜ್ಜ – ಶಾಂತಿ ಸಿಗೋದಿಲ್ಲ.

ಡಾ। ಸುಧಾ – ಸಿಗೋದಿಲ್ಲ. ಎಷ್ಟೋ ಅವರು ಮಾಡ್ತಾರಂತೆ, ಸೇವೆ ಬೇರೆಯೋರಿಗೆ. ಆದರೆ ಅದರಲ್ಲಿ ಅವರಿಗೆ ಸುಖ, ಶಾಂತಿ, ಸಮಾಧಾನ ಸಿಕ್ಕೋದಿಲ್ವಂತೆ.

ರಾಧಿಕಾ – ಅಂದ್ರೆ ಇದರಲ್ಲಿ ನಿಜವಾದ ಶಾಂತಿ ಇಲ್ಲ ಅಂತ ಗೊತ್ತಾಗಿದ್ಯಂತೆ ಅವರಿಗೆ.

ಡಾ। ಸುಧಾ – ಈ ಜನ್ಮದಲ್ಲಿ ಇಲ್ಲಿ, ಅಲ್ಲಿ ಎರಡೂ ಕಡೆ ಕಾಲಿಡೋದ್ರಲ್ಲೇ ಆಯ್ತಂತೆ ಅವರಿಗೆ. ಅದಕ್ಕೆ ಈ ಜನ್ಮದಲ್ಲಿ ನನಗೇನೂ ಆಗೋದಿಲ್ವೇನೋ ಮುಂದಿನ ಜನ್ಮಕ್ಕೆ ಕಾಯ್ಬೇಕೇನೋ ಅಂತಿದಾರೆ ಅವ್ರು.

ಅಜ್ಜ – ಭವಿಷ್ಯತ್ತಿನ ವಿಚಾರ ಬೇಡ. ಎಲ್ಲ ಆಲೋಚನೆಗಳನ್ನು ಬಿಟ್ಟು, ನೀನೇ – ಆ ಒಂದು ದೃಢ ನಂಬಿಕೆ, ವಿಶ್ವಾಸ ಬಂದುಬಿಟ್ರೆ ಆಯ್ತು. ಎಲ್ಲ ಅವ ನೋಡಿಕೊಳ್ತಾನೆ. ಯಾರು? ಭಗವಾನ್ ಒಬ್ಬ ಇದ್ದಾನೆ ಎಂಬ ದೃಢ ನಂಬಿಕೆ ಉಂಟಲ್ಲ, ಅವ ನೋಡಿಕೊಳ್ತಾನೆ. ಅವನಿಗೆ ಒಪ್ಪಿಸಿಬಿಟ್ರೆ ಆಯ್ತು. ಎಲ್ಲ ನೀನೇ ಅಂತ್ಹೇಳಿ. ಯಾವುದೂ ಚಿಂತೆ, ಸಂಶಯಗಳು ದೂ, ಇದೂ ಒಂದೂ ಬೇಡ. ಒಬ್ಬನು ಇದ್ದಾನೆಂಬ ದೃಢ ನಂಬಿಕೆ. ಅವ ಎಲ್ಲಿದ್ದಾನೆ. ಒಳಗೇ ಇದ್ದಾನೆ.

ಡಾ। ಸುಧಾ – ನಾವು ಒಬ್ಬರೇ ನಡೀಬೇಕು ಈ ದಾರಿಯಲ್ಲಿ, ಒಬ್ಬರೇ ಹೋಗ್ಬೇಕಾಗ್ತದೆ, ಒಂಟಿಯಾಗಿ ಸಾಧನೆ ಮಾಡುವಂಥದ್ದಲ್ವ ಅಂತ ಕೇಳ್ತಿದ್ದಾರೆ.

ಅಜ್ಜ – ಒಂಟಿಯಾಗಿ?

ಡಾ। ಸುಧಾ – ಬೇರೆ ಯಾರೂ ಸಿಗೋದಿಲ್ಲ. ನಾವು ಒಬ್ಬರೇ ಹೋಗ್ಬೇಕಾ ಈ ದಾರಿಯಲ್ಲಿ ಅಂತ – ಈ ಥರ ಹೋದ್ರೆ.

ಅಜ್ಜ – ಅಂದ್ರೆ?

ಡಾ। ಸುಧಾ –ಅಂದ್ರೆ ಈಗ ನಾನು ಹೇಳೋದು ಅವನೇ ನಾನು ಅಂತ – ಅದು ಬಹಳ ಒಂಟಿಯಾಗಿ ನಾವು ಮಾಡ್ಬೇಕಲ್ಲ ಅಂತ ಹೇಳ್ತಾರೆ. ಅಂದ್ರೆ ಬೇರೆಯವರ ಸಹಾಯವಿಲ್ದೇ ನಾವು ನಮ್ಮಲ್ಲಿಯೇ ಮಾಡ್ಬೇಕಲ್ವ?

ಅಜ್ಜ – ಹೌದು. ನಾವು ನಮ್ಮಲ್ಲಿಯೇ ಮಾಡ್ಬೇಕು. ಪ್ರತಿಯೊಬ್ಬರೂ ಏಕಾಂಗಿ.

ಡಾ। ಸುಧಾ – ಧೈರ್ಯ ಬಹಳಷ್ಟು ಬೇಕಲ್ವ ಅಂತ ಕೇಳ್ತಾರೆ. ಒಬ್ಬರೇ ನಡೀಲಿಕ್ಕೆ ಧೈರ್ಯ ಬೇಕಲ್ವ?

ಶಾಂತ – ಆ ಧೈರ್ಯಕ್ಕಾಗಿಯೇ ನೀನೇ ಅಂತ್ಹೇಳಿ ಶರಣಾಗತಿ ಆಗೋದು.

ಅಜ್ಜ – ಧೈರ್ಯಕ್ಕೆ ಅವ ಹತ್ತಿರದಲ್ಲಿದ್ದಾನೆ. ಅವನೇ ಇದ್ದಾನೆ ಎಂಬ ದೃಢ ನಂಬಿಕೆ ಬಂದರೆ ನಾವು ಏಕಾಂಗಿಯಲ್ಲ. ಅವ ಇದ್ದಾನಲ್ಲ. ಅವ ಒಟ್ಟಿಗೆ ಇದ್ದಾನೆ. ಯಾರು? ನಾವು ಯಾವುದನ್ನು ನಂಬುತ್ತೇವೋ ಅವನು ಒಟ್ಟಿಗೇ ಇದ್ದಾನೆ. ನಮ್ಮೊಟ್ಟಿಗೆ ನೋಡಿ ಜತೆಯಲ್ಲೇ ಇದ್ದಾನೆ ಅವ.

ಶಾಂತ – ಅದು ನಿಜವಾದ ಧೈರ್ಯ ಆಗ.

ಅಜ್ಜ – ಅದು ಮಾತ್ರ ಧೈರ್ಯ ಕೊಡುವಂಥಾದ್ದು ಅದೊಂದೇ. ಬಾಕಿ ಯಾವುದೂ ಧೈರ್ಯ ಕೊಡೋದಿಲ್ಲ.

ಡಾ। ಸುಧಾ – ಅವರು ಏನ್ಹೇಳ್ತಾರೆ ಅಂದ್ರೆ, ಆ ಇದು ಆ ಸಕಾರ ರೂಪವನ್ನು ಅವರು ಧ್ಯಾನ ಮಾಡ್ತಿದ್ರಲ್ಲ, ಅದು ಹೋದಮೇಲೆ ಈವಾಗ ಅವರಿಗೆ ಧೈರ್ಯವಿಲ್ವಂತೆ. ಮುಂದೆ ಏನ್ಮಾಡ್ಬೇಕೂಂತ ಗೊತ್ತಿಲ್ವಂತೆ. ಯಾವುದೋ ಒಂದು ಗೊಂದಲದಲ್ಲಿದ್ದಾರಂತೆ. ಒಬ್ಬರೇ ಹೋಗ್ಲಿಕ್ಕಾಗೋದಿಲ್ಲ ಅನ್ನೋ ಸ್ಥಿತೀಲಿದಾರಂತೆ ಅವ್ರು. ಭಯ ಆಗ್ತದಂತೆ. ನಂಗೆ ಒಂದು ಗುರುವಿನ ಅಥವ ದೇವರ ಕೃಪೆ ಇಲ್ಲದೆ ಇದ್ದರೆ ಮುಂದೆ ಹೋಗ್ಲಿಕ್ಕಾಗೋದೇ ಇಲ್ಲ ಇದರಲ್ಲಿ ಅನ್ನೋ ಒಂದು ಸಂಶಯ ಬಂದ್ಬಿಟ್ಟಿದೆ ಅವರಿಗೆ.

ಅಜ್ಜ – ಆ ಧೈರ್ಯವೇ ಗಟ್ಟಿ ಆದಾಗ, ಧೈರ್ಯಕ್ಕೆ ಒಬ್ಬ ಸಿಕ್ತಾನೆ. ನಾನು ಸೋತು ಹೋದೆ. ನನಗೆ ಈಗ ದಾರಿ ತಪ್ಪಿ ಹೋಯಿತು ಅಂತ ಮನಸ್ಸಿಗೆ ದೃಢವಾದಾಗ, ನಂಬಿಕೆ ಬಂದಾಗ ಆಗ ಅಲ್ಲಿ ಒಬ್ಬ ಸಿಕ್ತಾನೆ – ಅಲ್ಲಿ ಒಬ್ಬ ಸಿಕ್ತಾನೆ. ನಾನು ಸೋತು ಹೋದೆ ಅಂತ ಕಂಡಾಗ, ದೃಢವಾಗಿ ಆ ಕಳಕಳಿ ಬಂದಾಗ, ಅಲ್ಲಿ ದೈರ್ಯ ಕೊಡುವವ ಒಬ್ಬ ಸಿಕ್ತಾನೆ.

ಶಾಂತ – ಅಂದ್ರೆ ಸಂಪೂರ್ಣ ಮುಳುಗಿ ಬಿಡಬೇಕು ಅದರಲ್ಲಿ.

ಅಜ್ಜ – ನಾನು ಸೋತು ಹೋದೆ, ನೀನೇ ನೋಡಿಕೋ, ನಾನು ಸೋತು ಹೋದೆ ಅಂತ ಹೇಳಿ ಒಂದೇ ಅವನಿಗೆ ಇದು ಬಂದ ಕೂಡ್ಲೇ ಅಲ್ಲಿ ಒಬ್ಬ ಸಿಕ್ತಾನೆ. ಅಲ್ಲಿ ದಾರಿ ತೋರಿಸುವವ ಅವನಾಗಿ ಬರ್‍ತಾನೆ. ನಾವು ಹುಡುಕೊಂಡು ಹೋಗೋದು ಬೇಡ. ಒಂದು ರೂಂನಲ್ಲಿ ಕೂತುಕೊಂಡು ಕೂಡ ಆ ಕಳಕಳಿ ಬಂದಾಗ ಅಲ್ಲಿ ಬರ್‍ತಾನೆ ಅವ. ಹೌದು ಅಲ್ಲಿಯೇ ಅವನಿಗೆ ಆ ಒಂದು ಇದು ಬಂದಾಗ ಅಲ್ಲೇ ಬರ್‍ತಾನೆ.

ಡಾ। ಸುಧಾ – ಅವರಿಗೆ ಏನಾಗಿದೇಂತಂದ್ರೆ ಅವರ ಪ್ರಕಾರ ಅವರು ಜೀಸಸ್‌ನ ಒಂದು ಸಾಕಾರ ರೂಪದ ಮೇಲೆ ಎಷ್ಟು ಒಂದು ಪ್ರೀತಿ ಇತ್ತೂಂದ್ರೆ – ತೀವ್ರತೆ – ಅದು ತಾಯಿ ಮಗುವಿನ ಒಂದು ಪ್ರೀತಿ ಇರ್‍ತದಲ್ಲ ಹಾಗಿತ್ತು. ಈಗ ಅವರಿಗೇನಾಗಿದೆ ಅಂದ್ರೆ ಅದು ತಪ್ಪಿ ಹೋಬಿಟ್ರೆ, ಅದನ್ನು ಎಳೆದುಕೊಂಡು ಹೋದ ಹಾಗೆ ಭಾವನೆ ಬಂದಿದೆ.

ಅಜ್ಜ – ಅದನ್ನು ತಪ್ಪಿಸಿದವರ್‍ಯಾರು? ಭಾರತದಲ್ಲಿಯೋ ಅಲ್ಲ . . .

ಡಾ। ಸುಧಾ – ಅಂದ್ರೆ ಅಲ್ಲಿಯೇ ಒಬ್ರು ಗುರು ಅಂತೆ. ಬಾಹ್ಯದೇಶದಲ್ಲಿಯೇ. ಅವ್ರು ನೀವು ಈ ಸಾಕಾರ ರೂಪವನ್ನು ಹಿಡ್ಕೊಂಡಿದ್ದೀರಲ್ಲ, ಅದು ಏನೂ ಉಪಯೋಗ ಇಲ್ಲ ಅಂತ ಅದನ್ನು ಅವರಿಗೆ ಒಡೆದುಬಿಟ್ಟಿದ್ದಾರಂತೆ.

ಶಾಂತ – ಯಾಕೇಂದ್ರೆ ಇವ್ರು ಅವರನ್ನ ಮೊದಲು ತುಂಬ ನಂಬಿಬಿಟ್ಟಿದ್ದಾರೆ.

ಡಾ। ಸುಧಾ – ಒಂದು ಮಗುವನ್ನು ತಾಯಿಯಿಂದ ಬಲವಂತವಾಗಿ ಕಸಿದುಕೊಂಡಾಗ ಮಗುವಿಗೆ ಹೇಗೆ ಕತ್ತಲೇಲಿ ಬಿದ್ದ ಹಾಗೆ ಆಗ್ತದೆ, ಆ ಥರ ಅವರಿಗೆ ಆಗ್ಬಿಟ್ಟಿದೆ. ಏನ್ಮಾಡ್ಬೇಕೋ ಗೊತ್ತಿಲ್ಲ.

ಅಜ್ಜ – ನೋಡಿ ಅದೊಂದು ಒಳ್ಳೇದೂಂತ ಹೇಳಿ. ಹೇಗೆ? ತಾಯಿಯನ್ನು . . .

ಡಾ। ಸುಧಾ – ಕಳೆದುಕೊಂಡ ಮಗು ಪೇಚಾಡ್ತದಲ್ಲ . . .

ಅಜ್ಜ – ಆ ಮಗು ಅಳಲಿಕ್ಕೆ ಶುರುಮಾಡಿ, ತೀವ್ರತೆಯಿಂದ ನಾನು ಸೋತುಹೋಗಿದ್ದೇನೆ ಅಂತ ಹೇಳಲಿ. ಅವ ಬರ್‍ತಾನೆ. ಆ ಮಗು ಅಳಲಿಕ್ಕೆ ಪ್ರಾರಂಭ ಮಾಡಲಿ – ಒಳಗಿಂದ ಯಾವುದು ಅಳುವುದೂಂದ್ರೆ, ಅಲ್ಲಿಗೆ ತಾಯಿ ಓಡಿ ಬರ್‍ತಾಳೆ. ತಾಯಿ ಬರ್ಲೇಬೇಕಲ್ಲಿಗೆ. ನಾನು ಸೋತುಹೋದೆ ಅಂತ ಹೇಳಿ ಈ ಮಗುವಿಗೆ ಕಂಡಾಗ, ತಾಯಿ ಇರೋದು ಹೌದು ಅಂತಾದ್ರೆ, ತಾಯಿ ಬರ್ಲೇ ಬೇಕು. ಅಂದ್ರೆ ಒಳಗಿಂದೊಳಗೇ ನೋಡಿ ಒಳಗಿಂದೊಳಗೇ ಆಗುವಂಥಾದ್ದು. ಭಗವಾನ್! ನಾನು ಸೋತು ಹೋಗಿದ್ದೇನೆ ಅಂತ ಬಂದ ಕೂಡಲೇ ಅವ ಬರ್‍ತಾನೆ. ಯಾವುದೋ ಒಂದು ರೂಪದಿಂದ ಬರಬಹುದು. ಅವರವರ ಯೋಗ್ಯತೆಗೆ ಅನುಸಾರವಾಗಿ.

ಶಾಂತ – ಯೋಗ್ಯತೆಯ ಅರಿತು . . .

ಅಜ್ಜ – ಯೋಗ್ಯತೆಯ ಅರಿತು ಅಲ್ಲಿ ನಾನು ಸೋತುಹೋದ್ದು ಒಳ್ಳೇದಕ್ಕೇ ಅಂತ ಹೆಳಿ ಭಾವಿಸಿದರೆ, ನೋಡಿ ಅದು ಪಾಠ ಕಲೀಲಿಕ್ಕಾಯ್ತು. ಅವನು ಪರೀಕ್ಷೆ ಮಾಡಿದ್ದು ಅಂತ ಹೇಳಿ ಇಟ್ಟುಕೊಳ್ಳೋಣ. ಭಗವಂತನೇ ಪರೀಕ್ಷೆ ಮಾಡಿದ್ದು. ಇದನ್ನು ನಂಬಿಕೊಡಿದ್ದನ್ನು ಕಟ್ ಮಾಡಿದ್ದು ಅವರು – ಇದು ಪರೀಕ್ಷೆಗೆ. ಈ ಪರೀಕ್ಷೆಯಿಂದ ಇವನು ಇನ್ನೂ ಹೆಚ್ಚಾಗಿ ಇದರಲ್ಲಿ ಅದಾದಾಗ ತೀವ್ರತೆಯು ಬಂದಾಗ ನೋಡಿ, ಅವನು ಅಲ್ಲಿ ಬರಲೇ ಬೇಕು.

ಡಾ। ಸುಧಾ – ನಂಗೆ ಅಳೂನೇ ಬರೋದಿಲ್ಲ. ಒಳಗಡೆ ಎಲ್ಲ ಮರುಭೂಮಿ ಆಗ್ಬಿಟ್ಟಿದೆ, ಒಣಗ್ಹೋಗ್ಬಿಟ್ಟಿದೆ, ಅಳಲಿಕ್ಕೆ ಕೂಡ ಇಲ್ಲ ನನ್ಹತ್ರ ಅಂತಾರೆ. ಅಷ್ಟು ಒಣಗ್ಹೋಗ್ಬಿಟ್ಟಿದೆ, ಬೇಸರ ಆಗಿದೆ.

ಅಜ್ಜ – ಶರಣಾಗತಿ – ಆಖಿರಿಗೆ. ಶರಣಾಗತಿ ಎಲ್ಲವೂ ನೀನೇ ನೋಡಿಕೋಪ್ಪ. ಬರೇ surrender ಹೌದಪ್ಪ ನೀನೇ. ಜನರಿಂದ ನನಗೇನೂ ಸಿಕ್ಕೋದಿಲ್ಲ. ನಾನು ಜನರನ್ನು ನಂಬಿ ಸೋತುಹೋಗಿದ್ದೀನಿ. ಈಗ ನೀನೆ. ಆಯಾ ಹುಡುಕುತ್ತಾ ಇದ್ದಾಳೆ ಎಂಬುದು ಖಂಡಿತ ಕಾಣ್ತದೆ. ಹೌದು. ಹುಡುಕುತ್ತದೆ. ಏನನ್ನೋ ಹುಡುಕ್ತಾ ಉಂಟು. ಹುಡುಕುವವನಿಗೆ ಸಿಕ್ಕಲೇ ಬೇಕು.

ಸುಧಾಳ friend – ಅವರು ತುಂಬಾ ಚೆನ್ನಾಗಿ ಹಾಡ್ತಿದ್ರಂತೆ ಅಜ್ಜ. ಮಧ್ಯೆ ಒಂದೆರಡು ವರ್ಷ ಅವರಿಗೆ ಏನೋ ಗಂಟಲು ತೊಂದರೆಯಿಂದಾಗಿ ಹಾಡಲಿಕ್ಕಾಗಲಿಲ್ವಂತೆ. ಈಗ ಮತ್ತೆ ಹಾಡಬೇಕಂತ ಇಷ್ಟ ಇದೆಯಂತೆ. ಮತ್ತೆ ಕೈಯಿಂದ ಏನು ಸೇವೆ ಮಾಡ್ಲಿಕ್ಕೆ ಸಾಧ್ಯ ಇದೆ ಅದು ಮತ್ತೆ ಮಾಡಬೇಕು ಅನ್ನೋ ಆಸೆ ಇದೆಯಂತೆ.

ಅಜ್ಜ – ಸೇವೆ ಮಾಡ್ಬೇಕೂಂತ? ಎಂಥ ಸೇವೆ?

Friend – ಅದೇ ನಮ್ಮ ಕೈಶಕ್ತಿಯಿಂದ ಕಾಯಿಲೆ ನೋವು ವಾಸಿ ಮಾಡ್ತಾರಲ್ಲ. ಬರೀ ಕೈ power ಅಂತ ಹೇಳ್ತಾರೆ ಅದಕ್ಕೆ. ಮಾನಸಿಕವಾಗಿ ಇವಳಲ್ಲಿ ಏನು ಶಕ್ತಿ ಇದೆ ಅದನ್ನು ಉಪಯೋಗಿಸಿಕೊಂಡು . . .

ಅಜ್ಜ – ಮಾನಸಿಕವಾಗಿ?

Friend – ಅವರು ಹೇಳ್ತಾರೆ. ಯಾವುದೂ ಕಷ್ಟತರವಾದ ರೀತಿ ಅಲ್ಲದೆ ಸಾಧಾರಣವಾದ ರೀತಿಯಲ್ಲಿ ಜನರ ಜತೆ ಮಾತಾಡ್ಬೇಕು. ನನ್ನ ಕೈಲಿ ಏನು ಅವರಿಗೆ ಸೇವೆ ಮಾಡ್ಲಿಕ್ಕಾಗತ್ತೆ, ಪ್ರೀತಿಯಿಂದ, ವಿಶ್ವಾಸದಿಂದ, ಅವರ ಮನಸ್ಸಿಗೆ – ಮನಸ್ಸು ಮನಸ್ಸಿನಿಂದ ಮಾತಾಡ್ಬೇಕು.

ಅಜ್ಜ – ಅದು ಬೇಕಾದ್ದು ನಮಗೀಗ. ಮೌನದಿಂದ ಸಂಭಾಷಣೆ, ಮೌನದಿಂದ ಸಂಭಾಷಣೆ.

Friend – ಅವ್ರು ಹೇಳ್ತಾರೆ, ಗಿಡ, ಹೂವು, ಅದನ್ನೆಲ್ಲ ಕಂಡ್ರೆ ನಂಗೆ ತುಂಬಾ ಪ್ರೀತಿ ಇದೆ. ಅದೇ ರೀತಿ ಅವುಗಳ ಜತೆ ಹೇಗೆ ನಾವು ಸಂಭಾಷಣೆ ನಡೆಸ್ತೀವಿ, ಗಿಡ ಮರಗಳ ಜತೆ, ಹೂವಿನ ಜತೆ, ಆರೀತಿ ಸಾಧಾರಣವಾದ ರೀತಿಯಲ್ಲಿ ನಂಗೆ ಸಂಭಾಷಣೆ ಬೇಕು. ಕಷ್ಟಕರವಾದ ರೀತಿಯಲ್ಲಿ ಬೇಡ, ಸರಳವಾಗಿರ್ಬೇಕು ಅಂತ ಹೇಳ್ತಾರೆ. ದೇವರು ನನಗೆ ಏನೇನು gift ಕೊಟ್ಟಿದ್ದಾನೋ, ನನ್ನಲ್ಲಿ ಏನೇನು ಶಕ್ತಿ ಇದೆ ದೇವರು ಕೊಟ್ಟಿರೋದು, ಅದನ್ನೆಲ್ಲ ಉಪಯೋಗಿಸಿಕೊಂಡು, ಸಾಧಾರಣವಾದ ರೀತಿಯಲ್ಲೆ ವ್ಯವಹಾರ ನಡೆಸಬೇಕೂಂತ. ತುಂಬ ಸರಳವಾದ ರೀತಿಯಲ್ಲಿ.

ಅಜ್ಜ – ಅದು ಒಳ್ಳೇದೇ. ನೋಡಿ, ಅದೊಂದ್ಸರಿ ಓದಿ ಹೇಳಿಬಿಡಪ್ಪ, ನಿಧಾನದಲ್ಲಿ ಅರ್ಥ ಆಗುವ ಹಾಗೆ ಓದಿ ಹೇಳಬೇಕು.

ಸಿಂಗಳಾಚಾರ್ – ಆತ್ಮ ಸಾಕ್ಷಾತ್ಕಾರವೇ ಜಗತ್ಕಲ್ಯಾಣ.

ಅಜ್ಜ – ಸರಿಯಾಗಿ ಅರ್ಥ ಮಾಡಿ ಸರಿಯಾಗಿ ಹೇಳಿಬಿಡಿ . . . ಇದನ್ನು ನಾವು ಮೊದಲು ಸಂಪಾದನೆ ಮಾಡಿಕೊಂಡಾಗ ಅಥವ ನಾವು ಆಚರಣೆಗೆ ತಂದಾಗ ಸೇವೆ ಮಾಡ್ಲಿಕ್ಕೆ ಸಾಧ್ಯತೆ ಉಂಟು. ಸೇವೆ ಎಂದರೆ – ಆ ಒಂದು ಕೈಯಿಂದ ಸೇವೆ ಮಾಡೋದಲ್ಲ. ಮಾನಸಿಕವಾದ ಸೇವೆಗಳುಂಟು. ಈಗ ಒಬ್ಬನಿಗೆ ಖಾಯಿಲೆ ಉಂಟು. ಅವನನ್ನು ಹೋಗಿ treatment ಮಾಡುವ ಒಂದು ವಿಧಾನ ಉಂಟು. ಬರೇ . . . ಅದು ಬೇರೆ ಬೇರೆ ನಮೂನೆಗಳುಂಟು. ನಮಗೆ ಅತಿ ಸುಲಭದ್ದಾಗಬೇಕು ಅಂತ ಹೇಳಿದರೆ ನಮ್ಮ ಮನಸ್ಸನ್ನು ಸ್ವಲ್ಪ ಕೃಷಿ ಮಾಡಬೇಕು. ಅದನ್ನು ಹೇಳಿ – ಇಂಗ್ಲಿಷಿನಲ್ಲಿ ಹೇಳಿ ಅವರಿಗೆ – ಮೊದಲು ನೀವಾಗಿ, ನೋಡಿ ಮೊದಲು ಅವರಾಗಲಿ, ನಿಮ್ಮಲ್ಲಿ ನಿಮಗೆ ಪ್ರೀತಿ ಇರಲಿ ನೋಡಿ. ನಿಮ್ಮಲ್ಲಿ ನಿಮಗೆ ಪ್ರೀತಿ, ವಿಶ್ವಾಸ ಮೊದಲು ಬರಲಿ. ಆಮೇಲೆ ಅವರಿಗೆ ಸೇವೆ ಮಾಡುವಂತಹ ಅರ್ಹತೆ ಬರುತ್ತದೆ. ಆ ಅರ್ಹತೆಯನ್ನು ಸಂಪಾದಿಸಿಕೊಳ್ಳಬೇಕಾದರೆ, ತನ್ನನ್ನು ತಾನು ಮೊದಲು ಶೋಧನೆ ಮಾಡಿ ತನ್ನ ಪರಿಚಯವನ್ನು ಮಾಡಿ, ತನ್ನ . . . ಏನು? ಹೇಳ್ಲಿಕ್ಕೆ ಬರೋದಿಲ್ಲ ನಮಗೆ. ನೋಡಿ ಜನರ ಸೇವೆ ಅಂದ್ರೆ ಲೋಕಕ್ಕೆ ಹೋಗಿ ಸೇವೆ ಮಾಡೋದು ಅದು ಅಷ್ಟು ಸುಲಭದಲ್ಲಿ ನಿಮಗೆ ಆಗ್ಬೇಕಂದ್ರೆ, ಅಂತಹ ಅರ್ಹತೆಯನ್ನು ಪಟ್ಟಾಗ ನೋಡಿ ಅವ ಹೀಗೆ ಕೂತುಬಿಟ್ರೆ ಆಯ್ತು. ನೋಡಿ ಮೌನದಿಂದ ಸೇವೆ ಆಗಿ ಹೋಗ್ತದೆ. ನೋಡಿ ಏನಾಗಿದೆ ಅಂತ. ಇದು ಒಂದು ರೀತಿಯ ಸೇವೆ. ಇದಕ್ಕೆ department ಬೇರೆ ಉಂಟು. ಈಗ ನಾವು ಮಾಡ್ಬೇಕಾದ ಸೇವೆ ಏನಂದ್ರೆ, ನಾವು ಮೊದಲು ತಯಾರಾಗ್ಬೇಕು.

ರಾಧಿಕಾ – ಮೊದಲು ನಾನು ಯಾರು ಅನ್ನೋದನ್ನ ತಿಳೀಬೇಕಲ್ಲ ಅಜ್ಜ?

ಅಜ್ಜ – ಆದರ foundation ಬಿತ್ತಲ್ಲಿ. ಬಿಲ್ಡಿಂಗ್ ಬೇರೆ ಜನ ಕಟ್ತಾರೆ. ಬೇರೆ ಬೇರೆ ಜನ ಬರ್ತಾರೆ ಅದಕ್ಕೆ ನೋಡಿ ಸರಿಯಾಗಿ ಹೇಳಿಬಿಡಪ್ಪ. ನಾವು foundation ತಯಾರು ಮಾಡಿಬಿಡಬೇಕು.

ರಾಧಿಕಾ – ಒಂದು ಕಡೆಯಿಂದ ಒಂದು ಕಡೆಗೆ ಓಡ್ಹೋಗೋದು ಬೇಡ ಅಲ್ವ ಅಜ್ಜ.

ಅಜ್ಜ – ನೀವು ಇದ್ದಲ್ಲಿಯೇ ಇದ್ದುಕೊಂಡು ಸೇವೆ ಮಾಡ್ಲಿಕ್ಕೆ ಸಾಧ್ಯ.

ರಾಧಿಕಾ – ಅವ್ರು ಕೇಳ್ತಾರೆ ಹಾಗೆಲ್ಲ ಮಾಡ್ಲಿಕ್ಕೆ ಸಾಧ್ಯತೆ ಉಂಟಾ? ಈ ಜನ್ಮದಲ್ಲೇ ಆಗ್ಲಿಕ್ಕೆ ಆಗ್ತದಾ ಅಂತ ಕೇಳ್ತಿದ್ದಾರೆ.

ಅಜ್ಜ – ಅದು ಭವಿಷ್ಯತ್ ಬೇಡ. (ನಗು)

ರಾಧಿಕಾ – ಆ ಅರ್ಹತೆ ಪಡೀಬೇಕಲ್ವ ಅಜ್ಜ?

ಅಜ್ಜ ಹೌದು ನಾವು ಹೋಗುವುದನ್ನು ಬಿಟ್ಟು ಬರೇ, ಇಷ್ಟೇ.

ಅಜ್ಜ – ನಿಮ್ಮನ್ನು ನೀವು ನೋಡಿ. ಆಮೇಲೆ ನಿಮಗೆ ಸೇವೆ ಮಾಡುವಂತಹ ಅರ್ಹತೆ ಬರುತ್ತದೆ. ನೋಡಿ ಇದನ್ನು ನಾವು ಇಷ್ಟು ಹೇಳುವಾಗ ಅದರ ವಿವರ ನೀವು ಒಂದು ೧೦ ನಿಮಿಷ ಆದರೂ ಕೊಡಬೇಕು. ನೀವು ಅದನ್ನೆಲ್ಲ ಇದು ಮಾಡಿ.

ರಾಧಿಕ – ಹೇಳಿದೆ ಅಜ್ಜ. ಅವರಿಗೆ ಅರ್ಥ ಆಗ್ತಾ ಇದೆ. ಅವರು ಹೇಳ್ತಾರೆ, ಆ ಅರ್ಹತೆ ಈ ಜನ್ಮದಲ್ಲಿ ಪಡೀಲಿಕ್ಕಾಗ್ತದಾ? ಮತ್ತೆ ಇದು ನನ್ನ ಕೈಲಿ ಮಾಡ್ಲಿಕ್ಕಾಗತ್ತಾ ಅಂತ ಕೇಳ್ತಿದಾರೆ.

ಅಜ್ಜ – ಅದು ಭವಿಷ್ಯತ್ ವಿಚಾರ ಬೇಡ. ನೋಡಿ ಇದಕ್ಕೆ ಮೌನದಿಂದ ತಟಸ್ಥ . . . ಯಾವುದೋ ಆಲೋಚನೆ ಮಾಡುವುದು, ಹೊರಗಿನ ಯಾವುದೂ ಆಲೋಚನೆ ಮಾಡುವುದು ಬೇಡ. ಸೇವೆ, ಅದು, ಇದು, ಯಾವುದೂ ಬೇಡ. ಬರೇ . . . ಅಲ್ಲಿಂದ ಸೇವೆ ಪ್ರಾರಂಭ ಆಗ್ತದೆ ಜಗತ್ತಿಗೆ.

ರಾಧಿಕಾ – ಮನಸ್ಸನ್ನು ತಟಸ್ಥಗೊಳಿಸಬೇಕಲ್ವ ಅಜ್ಜ? ಈಗ ನಾನು ಸೇವೆ ಮಾಡ್ಬೇಕೂಂದ್ರೆ, ಯಾರಿಗೆ ಮಾಡ್ಲಿ ಅನ್ನೋದೇ ಮನಸ್ಸು ಒಂದು . . .

ಅಜ್ಜ – ಅಲ್ಲಿ ಸೇವೆ ಮಾಡುವ ನಾನು ಯಾರು ಎಂದು ಅರ್ಥ ಮಾಡಿಕೊಳ್ಳಲಿ ಮೊದಲು, ಆಮೇಲೆ ಸೇವೆ ಅಲ್ಲಿಂದಲೇ ಆಗ್ತದೆ. ಇಲ್ಲದಿದ್ದರೆ ಸೇವೆ ಮಾಡಿದ್ದೇನೆ ಎಂಬ ಭಾವನೆ ಉಂಟು ಅವನಿಗೆ. ಭಾವನಾತೀತನಾದಾಗ ಮಾತ್ರ ಸೇವೆಯ ಅರ್ಹರ್ತೆ ಬರ್ತದೆ.

ರಾಧಿಕ – ಮನಸ್ಸನ್ನು ಸ್ತಬ್ಧ ಮಾಡಲಿಕ್ಕೆ ಯಾವುದಾದರೂ ಮಂತ್ರ ಇದೆಯೋ ಅಂತ ಕೇಳ್ತಿದಾರೆ ಅಜ್ಜ.

ಅಜ್ಜ – ಏನು?

ರಾಧಿಕಾ – ಅವ್ರು ಹೇಗೆ ಮಾಡೋದು?

ಅಜ್ಜ – ಒಳಗೆ ಹೃದಯದಲ್ಲಿ ಒಬ್ಬ ಇದ್ದಾನೆ ಅಥವ ಪರಮಾತ್ಮ ಇದ್ದಾನೆ ಎಂಬ ವಿಶ್ವಾಸ, ಏನದಕ್ಕೆ ಮತ್ತೆ . . . ದೇವರ ಪ್ರಾರ್ಥನೆ. ಒಳಗೆ ಒಬ್ಬ ಇದ್ದಾನೆ ಎಂಬ ಧೈರ್ಯ ತಂದುಕೊಳ್ಳುವಂಥಾದ್ದೇ, ಆ್ಞಂ! ನೋಡಪ್ಪ ಓದಿ ಹೇಳು. ಇಂಗ್ಲಿಷ್‌ನಲ್ಲಿ ಓದಿ ಹೇಳಿ.

ಸಿಂಗ್ರಾಚಾರ್ – ಆತ್ಮ, ಪರಮಾತ್ಮ, ಪ್ರಪಂಚ.

ಅಜ್ಜ – ಇಂಗ್ಲಿಷ್‌ನಲ್ಲಿ ಹೇಳಿ ಅವರಿಗೆ. ನೀನು ಹೇಳ್ತೀಯಾ? ನೀವೇ ಹೇಳಿ.

ಸಿಂಗ್ರಾಚಾರ್ – ಆತ್ಮ is self, ಪರಮಾತ್ಮ is God, ಪ್ರಪಂಚ is World.
Self – God – Supreme Self.
The other thing is self.
Karma means Work, ಜ್ಞಾನ means knowledge, ಮೋಕ್ಷ means salvation.

ಅಜ್ಜ – ಇದನ್ನು ನಾವು ಪಡಕೊಂಡಾಗ ಸೇವೆ ಮಾಡುವಂತಹ ಅರ್ಹತೆ. ಅವನ ಸೇವೆ ಹ್ಯಾಗುಂಟು – ಇಂದ್ರಿಯಾತೀತನಾಗಿ ಸೇವೆ ಮಾಡಲಿಕ್ಕೆ ಸಾಧ್ಯತೆ ಉಂಟು. ಅದು ನಮಗೆ ಬೇಕು. ಪ್ರತಿಯೊಬ್ಬನಿಗೂ ನಾವು ಸೇವೆ ಮಾಡಲಿಕ್ಕೆ ನಮಗೆ ಸಾಧ್ಯ ಇಲ್ಲ. ಒಳಗೆ ಹೋಗ್ಬೇಕು ನೋಡಿ, ಅದು ಒಳಗೆ ಹೋಗಲಿ, ಮನಸ್ಸು ಅಂತರ್ಮುಖವಾಗಲಿ.

ರಾಧಿಕ – ಮತ್ತೆ ಅಜ್ಜ, ಅವರಿಗೆ ಅದೊಂದೇ ಖುಷಿ ಕೊಡೋದಂತೆ.

ಅಜ್ಜ – ಯಾವುದು?

ರಾಧಿಕ – ಆ ಸ್ಥಿತಿ, ಮೋಕ್ಷಕ್ಕೆ ಹೋಗಿ ಅಲ್ಲಿಂದ ಸೇವೆ ಮಾಡೋದೇ ಸಂತೋಷ ಸಿಗತ್ತೆ.

ಅಜ್ಜ – ಅದಕ್ಕೇ ಅದನ್ನೀಗ ತೆಗೆದದ್ದು.

ರಾಧಿಕ – ಮತ್ತೆ ನಾವು ಸೇವೆ ಮಾಡ್ಲಿಕ್ಕೆ ಯಾರ ಹತ್ತಿರವೂ ಹೋಗೋದು ಬೇಡ ಅಲ್ವ ಅಜ್ಜ. ಅವ್ರೇ ನಮ್ಮ ಹತ್ತಿರ ಬರ್ತಾರೆ.

ಅಜ್ಜ – ಅವ್ರು ಬರೋದು ಬೇಡ. ನಾವು ಇದ್ದಲ್ಲಿಂದ್ಲೇ ಸೇವೆ ಮಾಡುವ.

ರಾಧಿಕ – ಅವರಿಗೆ ಹಾಡು ಹೇಳಲಿಕ್ಕೆ ಬಹಳ ಆಸೆ ಅಂತೆ. ಆದರೆ ಗಂಟಲು ನೋವು ತುಂಬ ಇದೆಯಂತೆ. ಯಾಕೆ ಈ ಥರ ನಂಗೆ ತೊಂದರೆ ಕೊಟ್ಟಿದ್ದಾರೆ ಅಂತ ಕೇಳ್ತಿದಾರೆ.

ಅಜ್ಜ – ಒಂದು ಹಾಡು ಹಾಡ್ತರಂತ ಈಗ? ಸಾಧ್ಯ ಆದಷ್ಟು ಮಟ್ಟಿಗೆ, ಅವರಿಗೆ ಸಾಧ್ಯ ಆದಷ್ಟು ಮಟ್ಟಿಗೆ. ಅವರು ಬಂದ ಹಾಗೆ ಹಾಡಲಿ, ಬಂದ ಹಾಗೆ ಹಾಡಲಿ. ನಾವು ನೋಡುತ್ತ ಇದ್ದೇವೆ.

ರಾಧಿಕ – ಅವರಿಗೆ ಹೃದ್ಯಯದ ಜತೆ ಮಾತಾಡ್ಬೇಕೂಂತ ಆಸೆ ಅಲ್ಲ. ಹೇಗೆ ಹಾಡಿದರೂ ಅವರ ಹೃದಯಕ್ಕೆ ತಲುಪತ್ತೆ.

ಅಜ್ಜ – ಏನು ಇಲ್ಲಿಂದ ಬರೋದು ಶಕ್ತಿ ಇಲ್ಲ. ಅಲ್ಲಿಂದ, ಒಳಗಿಂದ್ಲೇ ಬರ್ತದೆ. ಒಳಗಿಂದ್ಲೇ ಬಂದ್ರೆ ಮಾತ್ರ ಅದು ಶಕ್ತಿ. ಹೊರಗಿಂದ ಬರೋದು ಬಿಟ್ಬಿಡೀಪ್ಪ. ಅವರು ಅವರಲ್ಲೇ ಹೇಳ್ಲಿ. ಹೌದು, ಹೌದು. ಅದು ಬೇಕಾದ್ದು ನಮಗೆ.

ರಾಧಿಕ – ಅವರು ಬಾಯಿಬಿಟ್ಟು ಹೇಳೋದೇನೂ ಬೇಡ್ವ ಅಂತ ಕೇಳ್ತಾ ಇದ್ದಾರೆ.

ಅಜ್ಜ – ಸ್ವಲ್ಪ ಬಾಯಿಬಿಟ್ಟು ಹೇಳಲಿ (ನಗು). ನೋಡಿ ಅದು ನಿಮ್ಮ ಸಂತೋಷಕ್ಕೆ, ಅವರ ಸಂತೋಷಕ್ಕೆ ಬೇಕಾಗಿ, ಅವರ ಆತ್ಮ ಸಂತೋಷಕ್ಕೆ ಬೇಕಾಗಿ ಹಾಡಲಿ. ಜನರಿಗೆ ಛಲೋದಾಗ್ಬೇಕು ಅಂತ ಹೇಳಿ ಏನಿಲ್ಲ. ಅಷ್ಟೇ. ಅದು ತನ್ನಲ್ಲಿ ತಾನು ಮಾತ್ನಾಡುವಂಥ ಕ್ರಿಯೆ ಒಂದು ಉಂಟು. ತನ್ನಲ್ಲಿಯೇ ತಾನು. ನೋಡಿ ಅದನ್ನ ಯಾರೂ ಕೇಳೋದಿಲ್ಲ. ಅವರಷ್ಟಕ್ಕೆ ನೋಡಿ ಜನರ ಮೇಲೆ ಕಣ್ಣು ಹಾಕೋದು, ದೃಷ್ಟಿ ಹಾಕೋದು ಏನೂ ಬೇಡ. ಸ್ವಗತ ಭಾಷಣ, ಸ್ವಗತ – ಒಂದು ಇದುಂಟಲ್ಲ. ಅದೇ. ನೋಡಿ ಅದು ಇರುವಂಥದ್ದು ಇಡೀ – ಇವತ್ತು ಅಜ್ಜ free ಇದ್ದಾರೆ.

ರಾಧಿಕ – ಏನಜ್ಜ? ಅವರು ಹಾಡು ಹೇಳಿದ್ದಾಯ್ತಂತೆ. ಒಳಗಿಂದ ಹಾಡ್ಬಿಟ್ರಂತೆ.

ಅಜ್ಜ – ಆಯ್ತು. ಸಾಕು.

ರಾಧಿಕ – ಅವ್ರು ಹಾಡ್ತಿದಾರೆ ಅಜ್ಜ ಒಳಗೇ. ಅವ್ರು ಒಳಗೇ ಹಾಡಿದ್ರಂತೆ. ನೀವು ಕೇಳಿಸಿಕೊಂಡ್ರಾ?

ಅಜ್ಜ – ಇದೇ ರೀತಿಯಲ್ಲಿ ಸೇವಾ ಮನೋಭಾವನೆಯು ಉಂಟಾಗಲಿ. ಸೇವಾ ವಿಚಾರ. ಆ ಸೇವೆಯು ಒಳಗಿಂದೊಳಗೇ ಆಗಲಿ.

ರಾಧಿಕ – ಅವರು ಒಳಗೆ, ತುಂಬಾ ಒಳಗೆ ಹೋಗಿ ಹೇಳೋ ಅಂಥಾದ್ದು ಆಸೆನಂತೆ ಅಜ್ಜ.

ಅಜ್ಜ – ಅದೇ ಬೇಕಾದ್ದು, ಅದೇ ನಮಗೂ ಬೇಕಾದ್ದು.

ರಾಧಿಕ – ಅವರಿಗೆ ಅದೇ ಆಸೆಯಂತೆ.

ಅಜ್ಜ – ನಮಗೂ ಅದೇ, ನಮಗೂ ಬೇಕಾದ್ದು ಅದೇನೇ, ಅದೇ ಬೇಕಾದ್ದು.

ರಾಧಿಕ – ಹಾಡ್ತಾರಜ್ಜ.

ರೋಸ್‌ಮೇರಿ – ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ
ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ॥ ೩॥

ಅಜ್ಜ – ಇದರಿಂದ ಜನರ ಮನಸ್ಸು ಪರಿವರ್ತನೆ ಆಗಲಿಕ್ಕೆ ಸಾಧ್ಯ ಉಂಟು. ಅದಕ್ಕಿಂತ ದೊಡ್ಡ ಸೇವೆ ಯಾವುದೂ ಇಲ್ಲ. ಆಂದ್ರೆ ಅದು ಬಾಯಲ್ಲಿ ಹೇಳ್ಬೇಕೂಂತ ಇಲ್ಲ. ಈ ಮನೋಭಾವನೆ ಬೇಕಾದ್ದು. ಮನೋಭಾವನೆ ಇದ್ದರೆ ಸಾಕು.

ರಾಧಿಕ – ಅವ್ರು ಹಾಡು ಹೇಳ್ಬೇಕಾ ಜನಗಳಿಗೆ ಅಂತ ಕೇಳ್ತಾ ಇದ್ದಾರೆ.

ಅಜ್ಜ – ಹಾಡು !

ರಾಧಿಕ – ನೀವು ಜನಗಳಿಗೆ ಹಾಡು ಕೇಳೂಂತ ಹೇಳ್ತಿದೀರಾಂತ ಕೇಳ್ತಿದಾರೆ.

ಅಜ್ಜ – ಜನರಿಗೆ?

ರಾಧಿಕ – ಹಾಡು ಹೇಳೂಂತ ಹೇಳ್ತಿದೀರ ಅಂತ ಕೇಳ್ತಾರೆ.

ಅಜ್ಜ – ಇಲ್ಲ. ನಿಮ್ಮ ಅಂತರಂಗದಲ್ಲಿ ಅದು . . . ಹಾಡು, ಆ ರೀತಿ ಇದು ಬಂದರೆ ಜನರ ಮೇಲೆ ಪ್ರಭಾವ ಬೀರಲಿಕ್ಕೆ ಸಾಧ್ಯತೆ ಉಂಟು. ನೋಡಿ ಅಂತಹ ಮನೋಭಾವನೆ ಬಂದಾಗ ಅದು ಒಬ್ಬರಿಗೆ ಆದರೂ ಕೂಡ ಪರಿಣಾಮ ಆಗಲಿಕ್ಕೆ ಸಾಧ್ಯ.

ರಾಧಿಕ – ಅವ್ರು, ನಾನು ಯಾಕೆ ಹಾಡು ನಿಲ್ಸಿದೆ, ಹಾಡು ಹೇಳೋದು ಬಿಟ್ಟೆಂತ ನನಗೆ ಗೊತ್ತಾಗ್ಲಿಲ್ಲ, sudden ಆಗಿ ನೋವು ಬಂತು, ಗಂಟಲಲ್ಲಿ ನೋವು ಇತ್ತು. ಅದ್ಯಾಕೆ ಹಾಗಿ ನಿಲ್ಲಿಸಿಬಿಟ್ಟೆ. ನನಗ್ಗೊತ್ತಿಲ್ಲ ಅಂತ ಹೇಳ್ತಾರೆ. ೨ ವರ್ಷದ ಹಿಂದೆ ನಿಲ್ಲಿಸ್ಬಿಟ್ಟೆ ಅಂತಾರೆ.

ಸಿಂಗ್ಳಾಚಾರ್ – ಅವ್ರು ಮೇಲೆ ಗುರಿ ತಲುಪೋಕ್ಕೆ ಜೋರಾಗಿ ಹಾಡು ಹೇಳ್ತಿದ್ರಂತೆ, ಭಾಳ ಹಾಡ್ಹೇಳ್ತಿದ್ರಂತೆ. ಅದು ನಿಂತ್ಹೋಯ್ತಂತೆ.

ಅಜ್ಜ – ನಿಂತ್ಹೋಗ್ಲಿ. ತೊಂದರೆ ಇಲ್ಲ, ನಿಂತ್ಹೋಗ್ಲಿ.

ಸಿಂಗ್ಳಾಚಾರ್ – ಆ ಹಾಡನ್ನೇ ಹೇಳಿ ಹೇಳಿ ಇದ್ಮಾಡ್ಬೇಕೂಂತ ಇದ್ದಿದ್ದು. ಆದ್ರೆ ಗಂಟ್ಲು ಇದಾಗ್ಹೋಯ್ತು.

ಅಜ್ಜ – ಮೌನದಿಂದ ಹಾಡಲಿ. ಮೌನದಿಂದ ಹಾಡಲಿ ಒಳಗೆ.

ರಾಧಿಕ – ಅವರದ್ದು ಹಳೇದ್ರದ್ದೇ ತುಂಬ ಇದೆ ಅಜ್ಜ. ಹಿಂದೆ ಹೀಗಾಗ್ತಿತ್ತು. ನನಗೆ ತುಂಬಾ ಪ್ರೀತಿಯಿಂದ ಹಾಡಿದ್ರೆ ತುಂಬಾ ಒಳಗ್ಹೊರಟ್ಹೋಗ್ತಿದ್ದೆ. ಈಗ ಹಾಗೆ ಹಾಡೋಕಾಗ್ತ ಇಲ್ಲ ಅನ್ನೋದೇ ಅವರಿಗೆ ಬೇಜಾರಾಗಿದೆ.

ಅಜ್ಜ – ಬೇಜಾರನ್ನು ಬಿಟ್ಟುಬಿಡ್ಲಿ. ಯಾವುದಕ್ಕೆ? ಹಿಂದೆ ಕಳೆದ ವಿಚಾರವನ್ನು, ಹಿಂದೆ ಕಳೆದ ವಿಚಾರವನ್ನು ಬಿಟ್ಟು ಹೊಸ ವಿಚಾರಕ್ಕೆ ಹೋಗಲಿ.

ರಾಧಿಕ – ಅವರು ಕೇರಳದಲ್ಲಿ ಅಮೃತಾನಂದಮಯಿ ಅನ್ನೋರು ತುಂಬಾ ಚನ್ನಾಗಿ ಹಾಡ್ತಿದ್ರಂತೆ ಅಜ್ಜ. ಅವರ ಶಿಷ್ಯರೊಬ್ಬರು ಹಾಡ್ತಾರಂತೆ. ಮೊದ್ಲು ಹಾಡ್ತಿರ್ಲಿಲ್ವಂತೆ. ಸುಮ್ನೆ ಹೀಗೆ ಕೂತಿದ್ರಂತೆ. ತಾಯಿ ಬಂದು ಹೀಗೆ ಮುಟ್ಟಿದ ತಕ್ಷಣ ತುಂಬಾ ಚೆನ್ನಾಗಿ ಹಾಡ್ಲಿಕ್ಕೆ ಶುರು ಮಾಡಿದ್ರಂತೆ. ಅವ್ರು ಏನೂಂದ್ರೆ, ಅವರಿಗೆ ಜೀವಸ್ವರೂಪ, ಹಾಡೋ ಸ್ವರೂಪ ಅಂತ ಗೊತ್ತಂತೆ. ಅದು ಯಾರಾದ್ರೂ ನನ್ನನ್ನು ಹೀಗೆ ಮುಟ್ಟಿದರೆ ಇನ್ನೂ ಚೆನ್ನಾಗಿ ಹಾಡ್ತೀನಿ ಅನ್ನೋ ಒಂದು ಆಸೇನಂತೆ ಅವರಿಗೆ. ಯಾರಾದರೂ ಹೀಗೆ ಮುಟ್ಟಿದರೆ.

ಅಜ್ಜ – ನೋಡು, ಅಂಥ ಸಂದರ್ಭ ಸನ್ನಿವೇಶ ಬರುವಾಗ ನೋಡಿಕೊಳ್ಳುವ. ಈವಾಗ ಅದು ಆಲೋಚನೆ ಬಿಟ್ಟುಬಿಡ್ಲಪ್ಪ. ಅಂಥ ಸನ್ನಿವೇಶ ಬರುವಾಗ, ಅದು ತನ್ನಿಂತಾನೇ ಬರ್ತದೆ. ಅದಕ್ಕಾಗಿ ಪ್ರಯತ್ನ ಬೇಡ. ಅದಕ್ಕಾಗಿ ಮತ್ತೆ ಆಗಬೇಕೆಂಬ ಆಸೆ ಕೂಡ ಬೇಡ. ಅದು ಆಗೋದಿದ್ರೆ ಹ್ಯಾಗೆ ಬೇಕೋ ಅದು ಹಾಗೆ ಆಗಲಿ. ಅಲ್ಲ? ಅದು ಇಲ್ಲವಾದ್ರೆ ಮಧ್ಯದಲ್ಲಿ ಗೊಂದಲ ಆಗ್ತದೆ. ಅದು ಹೇಳಿ, ಅದು ಹೇಳಿ. ನಮ್ಮ ಗುರಿ ಯಾವುದು ಹೇಳಿ. ಅದು ಓದಿ ಹೇಳಿ. ಈಗ ನೋಡು, ನಮ್ಮ ಗುರಿ ಯಾವುದು ಅಂತ ಹೇಳಿ. ಆತ್ಮಸಾಕ್ಷಾತ್ಕಾರವೇ ನಮ್ಮ ಗುರಿ. ಎಲ್ಲ ಹೊಸ ಹೊಸ ವಿಚಾರಕ್ಕೆ ಆತ್ಮಸಾಕ್ಷಾತ್ಕಾರವೇ ನಮ್ಮ ಗುರಿ. ಎಲ್ಲ ಹೇಳಿ.

ರಾಧಿಕ – ಹಳೇದರ ಬಗ್ಗೆ ಚಿಂತೆ ಮಾಡೋದು ಬೇಡ, ಹೊಸದು ಹೀಗಾದ್ರೆ, ಹೀಗೆ ಮುಟ್ಟಿದ್ರೆ ಹೀಗಾಗತ್ತೆ ಅದು ಚಿಂತೆ ಮಾಡೋದು ಬೇಡ, ಮನಸ್ಸು ಸ್ತಬ್ಧವಾಗಿಟ್ಕೋ ಏನಾಗುತ್ತೋ ಅದಾಕ್ತದೆ ಅಂತ ಹೇಳಿದೆ.

ಅಜ್ಜ – ದೇವರು ಎಂಬುದು ವಿಶ್ವಾಸ ಉಂಟಲ್ಲ? ವಿಶ್ವಾಸ ನಂಬಿಕೆ ಉಂಟಲ್ಲ?

ರಾಧಿಕ – ಮೊದ್ಲು ಇವರಿಗೆ ಭಾಳ ವಿಶ್ವಾಸ ಇತ್ತಂತೆ. ಹೋಯ್ತಂತೆ ವಿಶ್ವಾಸ. ಈಗ ಮತ್ತೆ ಬಂದು ಹೋಗಿ ಬಂದು ಹೋಗಿ ಮಾಡ್ತದಂತೆ. ವಿಶ್ವಾಸ ಬರತ್ತಂತೆ, ಹೋಗ್ತದಂತೆ.

ಅಜ್ಜ – ನೋಡುವ ಓದಿ ಬಿಡಪ್ಪ. ನಮ್ಮ ನಮ್ಮ ಪರಿಚಯವನ್ನು ನಾವು ಮಾಡಿಕೊಂಡಾಗ, ಅಲ್ಲಿಂದ ಸೇವೆ ಮಾಡಲಿಕ್ಕೆ ಅವನಿಗೆ ಅರ್ಹತೆ ಬರ್ತದೆ. ಸೇವೆ ವಿಚಾರದಲ್ಲಿ ಹೇಳಿ ಆಯ್ತಲ್ಲ, ಅವರಿಗೆ ಫಸ್ಟ್‌ನಲ್ಲಿ. ಸೇವೆ ವಿಚಾರ ಮಾಡ್ಬೇಕೂಂದ್ರೆ, ಆ ಸೇವೆ ಮಾಡಲಿಕ್ಕೆ ಅರ್ಹತೆಯನ್ನು ಪಡ್ಕೊಳ್ಬೇಕಾದ್ರೆ, ನಮ್ಮ ಪರಿಚಯವನ್ನು ಮೊದ್ಲು ನಾವು ಮಾಡಿ, ಮೊದ್ಲು ಇದು foundation. ನಮ್ಮ ಪರಿಚಯವೇ ನಮಗೆ ಇಲ್ಲವಾದರೆ, ಏನೂ ಸೇವೆ ಮಾಡ್ಲಿಕ್ಕೆ ಬರೋದಿಲ್ಲ. ಅಲ್ಲಿ ಸೇವೆ ಉಂಟು. ಆದರೆ ನಾವು ಹೇಳುವಂಥ ಸೇವೆ ಬೇರೆ. ಈಗ ಸಾವಿರ ಜನ ಕೂತ್ಕೊಂಡಿದಾರೆ. ಒಬ್ಬ ಇಲ್ಲಿ ಕೂತ್ಕೊಂಡಿದ್ದಾನೆ. ಅವನನ್ನು ಪರಿಚಯ ಆಗಬೇಕು. ಅವರಿಗೆಲ್ಲರಿಗೆ ಇದು ಮಾಡ್ಲಿಕ್ಕೆ ಸಾಧ್ಯತೆ ಉಂಟು. ಮನಸ್ಸಿನ ಮೇಲೆ ಪರಿಣಾಮ ಉಂಟಾಗುವಂಥಾದ್ದು ಸೇವೆ. ನಮ್ಮ ಸೇವೆಯಿಂದ ಮನಸ್ಸಿನ ಮೇಲೆ ಪರಿಣಾಮ ಉಂಟಾಗ್ಬೇಕು. ದೈಹಿಕ ಸೇವೆ ನಾವು ಒಪ್ಪುವುದಿಲ್ಲ. ಅದು ಬೇಕು. ಅದಕ್ಕೆ department ಬೇರೆ ಉಂಟು. ಅಲ್ಲಿ ದೈಹಿಕ ಸೇವೆಗೆ ಅವರಿಗೆ ಅಪೇಕ್ಷೆ ಉಂಟು ಅಂತ ಹೇಳಿ ಆದರೆ, ಅದು ಬೇರೆ ವಿಚಾರ.

ರಾಧಿಕ – ಅವ್ರು ಎಲ್ಲ ಮಾಡ್ತಿದ್ರಂತೆ ಅಜ್ಜ. ಆದ್ರೆ ಯಾವುದಕ್ಕೂ ಒಂದು ಸಮಾಧಾನ ಸಿಕ್ತಿರ್ಲಿಲ್ವಂತೆ.

ಅಜ್ಜ – ಅದೆಲ್ಲ ಹೋಯ್ತಲ್ಲ. ಅದೆಲ್ಲ ಬಿಟ್ಟು ಬಿಡಿ. ಸಮಾಧಾನ ಇಲ್ದಿದ್ರೆ, ಅದೆಲ್ಲ ಹೋಯ್ತಲ್ಲ. ಇನ್ನು ತಟಸ್ಥವಾಗಿದ್ದುಕೊಂಡು ನೋಡಿ. ಮೌನದಿಂದ ಅಂತರ್ವಿಚಾರ. ಅಂದ್ರೆ ಒಳಗೆ ಯಾವುದೋ ಒಂದು ಶಕ್ತಿ ಉಂಟು ಪರಮಾತ್ಮನೋ, ಯಾವುದೋ ಏನೋ ಒಂದು ಉಂಟು ಎಂಬುದರ ಮೇಲೆ ವಿಶ್ವಾಸ, ಧೈರ್ಯದಿಂದ ಅದಕ್ಕೆ ಬೇಕಾದರೆ ನಾಮ ಸ್ಮರಣೆ ಮಾಡಿಕೊಳ್ಳಬಹುದು. ಯಾವುದಾದರೂ ಒಂದು. ಹರೇ ರಾಮ ಹರೇ ಕೃಷ್ಣ, ಏನೋ ಒಂದು ಹೇಳಿದರಲ್ಲ, ಅದು ಅಂತರ್ಯದಲ್ಲಿ ಆಗ್ತಾ ಇರಲಿ. ಹರೇ ರಾಮ ಹರೇ ಕೃಷ್ಣ ಹೇಳಿದರಲ್ಲ.

ರಾಧಿಕ – ಅವ್ರು ಹೊರಗೆ ಕೆಲಸ ಮಾಡ್ತಿದ್ದಾಗ ಒಳಗೇ ನಡೀತಿರ್ಬೇಕು.

ಅಜ್ಜ – ಹೌದು.

ರಾಧಿಕ – ಮೌನದ ಬಗ್ಗೆ ಏನೂ ಹೇಳ್ಲಿಲ್ಲ. ಅವ್ರೆಷ್ಟೇಳಿದ್ರು, ನಾವು ಯಾವ್ದೇ ಕೆಲ್ಸ ಮಾಡ್ತಿದ್ರೂ ಒಳಗಡೆ ಜಪದ ಮೇಲೆ, ದೇವರ ಮೇಲೆ ಮನಸ್ಸಿರಬೇಕು, ಏನೇ ಕೆಲಸ ಹೊರಗ್ಮಾಡ್ತಿದ್ರೂ.

ಅಜ್ಜ – ನಮ್ಮ ದೇಹದ ಮೇಲೆ ಪರಿಣಾಮವಲ್ಲ ಇದು. ನಾವು ಹೇಳುವಂಥಾದ್ದು ಇದು ಸೂಕ್ಷ್ಮ ಮತ್ತು ಕಾರಣ ದೇಹದ ವಿಚಾರಗಳು ಮಾತ್ರ ಹೇಳುವಂಥಾದ್ದು. ಪರಿಣಾಮ ಒಳಗಿಂದೊಳಗೇ ಆ ಜೀವಾತ್ಮನಿಗೂ ಅದು ಅನ್ವಯಿಸಿ ಆ ರೀತಿ ಪರಿಣಾಮವನ್ನು ನಾವು ಆತ್ಮಸಾಕ್ಷಾತ್ಕಾರದ – ನಮ್ಮ ಗುರಿ ಏನು?

ಇದು ನಾವು ಹೇಳುವಂಥಾದ್ದು ಮನಸ್ಸು, ಬುದ್ಧಿಯ ಆಚೆಗಿನ ವಿಚಾರ ಹೇಳುವಂಥಾದ್ದು. ಹೇಳಪ್ಪ. ನೀವು ನೋಡಿ, ಈಗ ಸೇವೆ ಮಾಡ್ಬೇಕು ಅದು ಮಾಡ್ಬೇಕು ಇದು ಮಾಡ್ಬೇಕು ಎಲ್ಲ ಕಾಣುವಂಥಾದ್ದು ಏನು? ನಮ್ಮ ಮನಸ್ಸಿಗೆ. ಈಗ ನಾವು ಹೇಳುವಂಥ ವಿಚಾರ ಮನಸ್ಸು ಬುದ್ಧಿಯ ಆಚೆಗಿನ ವಿಚಾರವನ್ನು ನಾವು ಕೊಡುವಂಥಾದ್ದು.

ಸುಧಾ – ಅದಕ್ಕೆ ಅವರಿಗೆ ಏನು ಮಾಡಿದರೂ ಸಮಾಧಾನ ಸಿಗ್ಲಿಲ್ವಂತೆ.

ಅಜ್ಜ – ಯಾತಕ್ಕೆ?

ಸುಧಾ – ಅದೆಲ್ಲ ಮನಸ್ಸಿನ ಮೂಲಕ ಆಗ್ತ ಇತ್ತಲ್ಲ ಅವರಿಗೆ, ಅದಕ್ಕೆ ಅವರು ಇಷ್ಟು ದಿವಸ ಏನು ಮಾಡಿದ್ರೂ ಅವರಿಗೆ ಸಮಾಧಾನ ಸಿಗ್ಲಿಲ್ವಂತೆ.

ಅಜ್ಜ – ಅದರಲ್ಲಿ ಅಪೇಕ್ಷೆ ಇತ್ತು ಹಾಗಾದರೆ.

ಸುಧಾ – ಅಪೇಕ್ಷೆ ಇತ್ತು.

ಅಜ್ಜ – ಆದ್ರೆ ಕೆಲ್ಸ ಮಾಡ್ತಾ ಇದ್ರು.

ಸುಧಾ – ಸಮಾಧಾನ ಇರ್ಲಿಲ್ಲ. ಏನು ಮಾಡಿದ್ರೂ, ಸೇವೆ ಮಾಡಿದ್ರೂ ಸಮಾಧಾನ ಇರ್ಲಿಲ್ಲ.

ಅಜ್ಜ – ಸಮಾಧಾನ ಇರ್ಲಿಲ್ಲ. ಇದನ್ನಷ್ಟು ಅವರಿಗೆ complete ಇದು ಮಾಡ್ಬಿಟ್ರೆ ಆಯ್ತು ಅವರಿಗೆ. ನಮಗೆ ಮುಖ್ಯ ಬೇಕಾದ್ದು ನಮ್ಮ ಗುರಿ ಏನು ಅಂತ್ಹೇಳಿ? ಯಾವುದು? ಈಗ ನಮ್ಮ ಗುರಿ ಯಾವುದು? ನಾವು ಈಗ ಮನೆಯಿಂದ ಬಂದಿದ್ದೇವೆ. ವಾಪಸ್ ಮನಗೆ ಹೋಗ್ಬೇಕು. ಇಲ್ಲಿದ್ದೇವೆ. ಹಾಗಾಗಿ ನಾವು ಜನ್ಮಕ್ಕೆ ಬಂದಿದ್ದೇವೆ. ಜನ್ಮದಲ್ಲಿದ್ದೇವೆ. ಒಂದು ದಿವಸ ಹೋಗಲಿಕ್ಕುಂಟು. ನಮ್ಮ ಗುರಿ ಯಾವುದಾಯ್ತು ಹಾಗಾದರೆ?

ಸುಧಾ – ಆತ್ಮ ಸಾಕ್ಷಾತ್ಕಾರವೇ ನಮ್ಮ ಗುರಿ.

ಅಜ್ಜ – ಆತ್ಮಸಾಕ್ಷಾತ್ಕಾರವೇ ನಮ್ಮ ಗುರಿ. ಆ ವಿಚಾರದಲ್ಲಿ ಮಾತ್ರ, ಒಂದೊಂದು department ಬೇರೆ. ಈಗ ನೀವು ಡಾಕ್ಟರ್ ಆಗಿದ್ದೀರಿ. ಇದರಲ್ಲಿ ಎಷ್ಟು ವಿಧಗಳುಂಟು?

ಸುಧಾ – ಬಹಳಷ್ಟು ವಿಧಗಳುಂಟು.

ಅಜ್ಜ – ಬಹಳಷ್ಟು ವಿಧಗಳುಂಟು. ಆಧ್ಯಾತ್ಮ ಪ್ರತಿಯೊಂದು ಇಲ್ಲಿ ಇರುವಂಥ ಇದು – ಗುರಿಯ ವಿಚಾರದಲ್ಲಿ, ಮಾನವನ ಗುರಿ ಯಾವುದು ಅಂತ ಹೇಳಿ ಒಂದೇ. ಈ ಗುರಿಯ ಕಡೆಗೆ ಹೋಗುವಾಗ ಆ ಎಲ್ಲ ಕೆಲಸಗಳನ್ನೂ ಮಾಡಿಕೊಂಡು ಹೋಗುವಂಥಾದ್ದು. ವ್ಯವಹಾರದಲ್ಲಿ ಪಾರಮಾರ್ಥಿಕ ಅಂದ್ರೆ ಇದು. ಅದು ವ್ಯವಹಾರವನ್ನು ಬಿಡಬೇಕು ಅಂತ್ಹೇಳಿ ಇಲ್ಲ. ನಮ್ಮ ಗುರಿಯ ಕಡೆ ದೃಷ್ಟಿ. ಅದನ್ನೇ pin point ಆಗಿ ಇಟ್ಟುಕೊಂಡು ಯಾವ ವ್ಯವಹಾರವನ್ನೂ ಮಾಡ್ಬಹುದು. ನಮ್ಮ ಗುರಿ ಗೊತ್ತು ಬೇಕು. ಅದು ಅಷ್ಟು ವಿಚಾರ ಮೊದ್ಲು ಹೇಳಿಬಿಡಿ. ಯಾವುದು ಕೆಲಸ, ಯಾವುದು ಏನು ಮಾಡುವುದು, ನಮ್ಮ ಮುಖ್ಯ ಗುರಿ ಯಾವುದು ಅಂತ್ಹೇಳಿ.

ಸುಧಾ – ಅವ್ರು ಕೇಳ್ತಾರೆ ಅಜ್ಜ, ಈ ಭಕ್ತಿ ಮಾರ್ಗ, ಕರ್ಮ ಮಾರ್ಗ, ಜ್ಞಾನ ಮಾರ್ಗ ಎಲ್ಲ ಒಟ್ಟೊಟ್ಟಿಗೆ ಆಗ್ಲಿಕ್ಕೆ ಸಾಧ್ಯ ಉಂಟ? ಇಲ್ಲ ಒಂದೊಂದು separate ಆಗಿ ಹೋಗ್ಬೇಕ ಅಂತ.

ಅಜ್ಜ – ಅಂದ್ರೆ?

ಸುಧಾ – ಈಗ ಈ ಆತ್ಮಸಾಕ್ಷಾತ್ಕಾರವೇ ನಮ್ಮ ಗುರಿ ಅಂತ ಆಯ್ತು. ಆದರೆ ಕರ್ಮ ಮಾರ್ಗದಲ್ಲಿ ಹೋದೋನು ಕರ್ಮಮಾರ್ಗದಲ್ಲಿ ಮಾತ್ರ ಹೋಗ್ಬೇಕಾ ಇಲ್ಲ ಜ್ಞಾನ ಮಾರ್ಗ, ಕರ್ಮಮಾರ್ಗ ಒಟ್ಟಿಗೆ combine ಮಾಡಿ ಹೋಗ್ಲಿಕ್ಕೆ ಉಂಟ?

ಅಜ್ಜ – ಕರ್ಮದಿಂದ ಜ್ಞಾನ, ಜ್ಞಾನದಿಂದ ಮೋಕ್ಷ. ಕರ್ಮದಿಂದ ಪರಿವರ್ತನೆ. ಜ್ಞಾನದಿಂದ ವಿಕಾಸವಾದಾಗ ಸಾಕ್ಷಾತ್ಕಾರ. ನೋಡಿ ಇದಕ್ಕೊಂದು ದೃಷ್ಟಾಂತವನ್ನು ಹೇಳಬಹುದು. ಧ್ಯಾನ ಮಾಡುವವನು, ಧ್ಯಾನದಿಂದ ಧ್ಯಾನಮಾಡಲ್ಪಡುವವನೇ ಆದಾಗ, ಆಗ ಅಲ್ಲಿಂದ. . . ಅಲ್ಲಿಂದ . . .

ಸುಧಾ – ಶೋಧನೆಯು ಪ್ರಾರಂಭ, ವಿಕಾಸವು ಪ್ರಾರಂಭ.

ಅಜ್ಜ – ಪರಿವರ್ತನೆ ಹೊಂದಿದ ಜೀವಾತ್ಮನು ಜ್ಞಾನದಿಂದ ತಾನು ಯಾರು ಎಂಬ ವಿಚಾರದಿಂದ ವಿಕಾಸ ಹೊಂದಿದಾಗ ಸಾಕ್ಷಾತ್ಕಾರ. ಅಲ್ಲಿ ಕರ್ಮಕ್ಕೂ ಪ್ರಾಧಾನ್ಯ ಇಲ್ಲ, ಜ್ಞಾನಕ್ಕೂ ಪ್ರಾಧಾನ್ಯವಿಲ್ಲ. ಎರಡೂ ಹೋಯ್ತು. ಈ ಎರಡೂ ಹೋಗುವ ದಾರಿಯಲ್ಲಿ ಸಿಕ್ಕುವಂಥದ್ದು. ಕರ್ಮ ಮತ್ತು ಜ್ಞಾನ. ಕರ್ಮದಿಂದ ಪರಿವರ್ತನೆಯಾದ ಜೀವಾತ್ಮನು ಪರಿವರ್ತನೆ ಆದಾಗ ಏನಾಗ್ತಾನೆ? ನೋಡಪ್ಪ ಇಲ್ಲಿ ಹೇಳ್ತದಲ್ಲ ಇದೆಲ್ಲ ಈ . . . . (ದಿವ್ಯ ಜೀವನ).

ಸುಧಾ – ಹೌದು, ಕರ್ಮ ಮಾರ್ಗ – ನಾಮ ಸ್ಮರಣೆ, ಚಿಂತನೆ, ನಿಷ್ಕಾಮಕರ್ಮ, ಶರಣಾಗತಿ, ಸತ್ಯ, ಅಹಿಂಸೆ, ಈ ರೀತಿ ಯಾವಾತನು ತನ್ನ ಜೀವಿತ ಕಾಲದಲ್ಲಿ ಕೃತಿಯ ರೂಪದಲ್ಲಿರುತ್ತಾನೆಯೋ, ಅವನೇ ಮುಂದೆ ಆನಂದತ್ವರೂಪಿಯಾಗಲು ಅರ್ಹತೆಯುಳ್ಳವನು, ಮಾತ್ರವಲ್ಲ, ಆನಂದಸ್ವರೂಪಿಯೇ ಆಗುವನು.

ಅಜ್ಜ – ನೋಡು, ನೋಡು. ನಿಶ್ಚಯ ಅದು. ತಾನು ಯಾರು?

ಸುಧಾ – ತಾನು ಯಾರು? ತನ್ನ ಜನ್ಮದ ರಹಸ್ಯವೇನು? ಎಂಬುದನ್ನು ಶೋಧನೆಯಿಂದ ಅರಿತು, ಕರ್ಮ ಕರ್ತವ್ಯಗಳಲ್ಲಿ ನಿರತನಾದಾಗ, ತನ್ನ ಮೂಲಸ್ವರೂಪವಾದ ಆನಂದ ಸ್ವರೂಪವನ್ನು ಹೊಂದುವನು, ಆನಂದ ಸ್ವರೂಪಿಯೇ ಆಗುವನು. (ದಿವ್ಯ ಜೀವನ)

ಅಜ್ಜ – ಇದು ಪರಿವರ್ತನೆ ಆಯ್ತು. ಇದು ಜ್ಞಾನಮಾರ್ಗ. ಇದು ವಿಕಾಸವಾಗುವಂಥಾದ್ದು. ಅಂದ್ರೆ, ಧ್ಯಾನ ಮಾಡಲ್ಪಡುವವನ ವಿಕಾಸ. ನಿರ್ಗುಣ, ನಿರಾಕಾರಕ್ಕೆ ಇಳೀತದೆ. ಇದು ಸಾಕಾರ ಆಯ್ತು. ಇಲ್ಲೀವರೆಗೆ ಸಾಕಾರವಾಯ್ತು.

ಸಾಕಾರವು ತನ್ನ ಅಸ್ತಿತ್ವವನ್ನು ಕಳೆದುಕೊಂಡಾಗ ನಿರ್ಗುಣ ಉಂಟಾಯ್ತು. ಆನಂದ ಸ್ವರೂಪವು . . . ಇದು ಗಂಟೆಗಟ್ಟಲೆ ವಿಚಾರ ಮಾಡಲಿಕ್ಕುಂಟು. ಕರ್ಮ ಎಂದರೆ ಯಾವುದು? ನೋಡಿ ನಿಷ್ಕಾಮಕರ್ಮ. ಇದು ಸೇವೆ ಆಯ್ತು. ಕರ್ತವ್ಯ ದೃಷ್ಟಿಯಿಂದ ಮಾಡುವಂಥ ಕರ್ಮವೇ ಕರ್ಮ. ಇದು ಕರ್ಮವಲ್ಲ. ನೀವು ಏನು ಸೇವೆ ಮಾಡ್ತೀರಿ? ನಿಮ್ಮ foundation ಎಲ್ಲಿ ಉಂಟು? ನೋಡಿ. ಆ foundation ನೀವು ಸ್ಥಿರ ಮಾಡಿಕೊಂಡಾಗ ನೋಡಿ ಸೇವೆಯು ನಿಮ್ಮಿಂದ, ನಿಮ್ಮಲ್ಲಿಗೆ ಜನರು ಬರ್ತಾರೆ. ಯಾಕೆ? ಸೇವೆಯನ್ನು ಅವರು ಹೊಂದುತ್ತಾರೆ. ನೀವು ಹೀಗೆ ಇಷ್ಟೇ . . . ನೀವು ಮಾಡಿದರೆ ಸಾಕು. ನಿಮ್ಮಿಂದ ಹತ್ತು ಜನರಿಗೆ ಸೇವೆ ಆಗಿ ಬಿಡ್ತದೆ. ಅಂದ್ರೆ ಇದು ಒಳಗಿಂದೊಳಗೇ ಮನಸ್ಸನ್ನು ಪರಿವರ್ತನೆ ಹೊಂದುವಂಥಾದ್ದು ಸೇವೆ. ಮಾನಸಿಕ ಸೇವೆ. ಹಾಗಾದರೆ ನಮ್ಮ foundation ನಾವು ಭದ್ರ ಪಡಿಸಿಕೊಳ್ಳುವಂಥದ್ದೇ ಇರುವಂಥಾದ್ದು. ಅದರ ಮೇಲೆ ಎಲ್ಲವೂ ಉಂಟು. ಈವಾಗ ಸೇವೆ ಮಾಡ್ತೀರ. ನಾನು ಸೇವೆ ಮಾಡ್ತೀನಿ ಎನ್ನುವ ಭಾವನೆ ಅಲ್ಲಿ ಇಲ್ಲದೆ, ಸೇವೆ ಮಾಡ್ಲಿಕ್ಕೆ ಆಗೋದಿಲ್ಲ. ನಿಷ್ಕಾಮ ಕರ್ಮ. ಇದುವೇ ಸೇವೆ. ಅವ ಮಾಡ್ತಾನೆ. ಆದ್ರೆ ಅವನಿಗೆ, ಅವನ ಕಥೆ ಏನು ಹೇಳೋದು? ಅದು ನಿಜವಾದ ಸೇವೆ. ಅದು ಇವನು ಇಡೀ . . . . ತಾನು ಮಾಡಿದ್ದೇನೆ ಎಂಬ ಭಾವನಾತೀತನಾಗಿ ಅವ ಸೇವೆ ಮಾಡ್ತಾನೆ. ಅಲ್ಲಿ ಹೀಗೆ ಹೀಗೆ ಮಾಡ್ಬೇಕು ಅಂತ್ಹೇಳಿ ಇಲ್ಲ. ಯಾವುದು? ಇಲ್ಲಿ ಬರೇ ಸೇವೆ ನೋಡಿ. ಇವನು ಅವನೇ ಆಗಿ ಅವನ ಮನಸ್ಸು, ಬುದ್ಧಿಗಿನ ಆಚೆಗೆ. ಹಾಗಾದರೆ ಮನಸ್ಸು ಬುದ್ಧಿಯಲ್ಲಿ ಒಂದಾಗಿ, ಆ ಬುದ್ಧಿಯಲ್ಲಿ ಒಂದಾದ ಮನಸ್ಸು ಹೃದಯದಲ್ಲಿ, ಮೂಲಸ್ಥಾನದಲ್ಲಿ ನಿಂತಾಗ ನೋಡಿ, ಅಲ್ಲಿಂದ ಅವ ದೊಡ್ಡ ಮೈದಾನದಲ್ಲಿ, ಸಾವಿರ ಜನರು ನಿಂತ ಮೈದಾನದಲ್ಲಿ ಹೀಗೆ ನಿಂತರೂ ಸಾವಿರ ಜನರಿಗೆ ಸೇವೆ ಮಾಡಿದ. ಒಂದು ಸೆಕೆಂಡಿನಲ್ಲಿ ಬರ್ತದೆ. ಇದು ಸಿದ್ಧಾಂತ. ಇಲ್ಲವಾದರೆ ಒಬ್ಬನಿಗೆ ಹೀಗೆ ಸೇವೆ ಮಾಡಿದ. ಮಾರನೇ ದಿವಸ ಅವನಿಗೆ ನೋವು, ಪುನಃ ಪುನಃ ಯಾವಾಗಲೂ ಇವನಿಗೆ ಸೇವೆ ಮಾಡುವುದೇ ಕೆಲಸ. ಬರೇ ಒಂದು ಅವನ ಮನಸ್ಸನ್ನು ಪರಿವರ್ತನೆ ಮಾಡ್ಲಿ. ಇದು ಸೇವೆ.

ಸುಧಾ – ಭಕ್ತಿ ಮತ್ತೆ ಕರ್ಮ ಎರಡೂ ಒಂದೇನಾ ಅಂತ ಕೇಳ್ತಾರೆ. ಕರ್ಮವನ್ನು ಭಕ್ತಿಯಿಂದ ಮಾಡಿದರೆ ಅದೂ ಒಂದೇನಾ ಅಂತ, ಭಕ್ತಿ ಮತ್ತೆ ಕರ್ಮ ಮಾರ್ಗ ಎರಡೂ ಒಂದೇನಾ ಅಂತ. ಇಲ್ಲಿ ನಾವು ಕರ್ಮ ಮಾರ್ಗ, ಜ್ಞಾನಮಾರ್ಗ ವಿವರಿಸಿದ್ದೇವೆ. ಅವರು ಕೇಳ್ತಾರೆ ಭಕ್ತಿ ಮಾರ್ಗನೂ ಇದೇನಾ ಅಂತ.

ಅಜ್ಜ – ದಾರಿ ಹಲವು. ಗುರಿ ಒಂದೇ ಅಂತ ಹೇಳ್ಬಿಡಿ. ಅವರವರು ಅರ್ಥ ಮಾಡಿಕೊಳ್ಳಲಿ. ಅವರವರಿಗೆ ಯಾವುದು ಹಿಡಿಸ್ತದೋ, ಅಂದ್ರೆ ಒಬ್ಬರ ಮನೋಭಾವನೆಯನ್ನು – ಈಗ ಏಸುಕ್ರಿಸ್ತನನ್ನು ನಂಬಿಕೊಂಡ್ರು ಅವರು, ಇನ್ನೊಬ್ಬರು ಬಂದು ಏಸುಕ್ರಿಸ್ತ ನಮಗೆ ಬೇಡ ಅಂತ ತಪ್ಪಿಸಿಬಿಟ್ಟರು. ಮನಸ್ಸಿಗೆ ಪೆಟ್ಟಾಯ್ತು. ನಮ್ದು ಹಾಗಿಲ್ಲ. ಅವರವರಿಗೆ ಯಾವ್ದು ಉಂಟೋ ಆ ದಾರಿಯಲ್ಲಿ ಹೋಗುವಂಥಾದ್ದು. ಭಕ್ತಿಮಾರ್ಗದಿಂದಲೂ ಹೋಗಬಹುದು, ಜ್ಞಾನಮಾರ್ಗದಿಂದಲೂ ಹೋಗಬಹುದಾ ಅಂದ್ರೆ . . . ಇಂಥದ್ದೂಂತ ಹೇಳೋದಿಲ್ಲ. ಅವರವರಿಗೆ ಯಾವುದು ಇಷ್ಟವುಂಟೋ . . .

ಸುಧಾ – ಅವರಿಗೆ ಮೌನ, ಅಂತರ್ಮೌನ, ಆ ಒಂದು ಸ್ಥಿತಿಯನ್ನು ಅನುಭವಿಸಬೇಕಂತೆ. ಒಳಗಡೆ ಮೌನ, ಅಂದ್ರೆ ಏನು ಆ ಸ್ಥಿತೀಗೆ ಹೋಗಬೇಕಂತೆ. ಅದಕ್ಕೆ ಏನು ಮಾಡ್ಬೇಕೂಂತ ಕೇಳ್ತಾರೆ.

ಅಜ್ಜ – ಅವರಿಗೆ ಒಟ್ಟಾರೆ ಬೇಕಾದ್ದು ಅದೇ. ತಟಸ್ಥ ಕೂರಬೇಕು. ಹಿಂದೆ ಕಳೆದದ್ದನ್ನೊಂದೂ ಆಲೋಚನೆ ಮಾಡೋದು ಬೇಡ. ಭವಿಷ್ಯತ್ತೂ ಬೇಡಪ್ಪ. ಪರಮಾತ್ಮ ಒಬ್ಬ ಇದ್ದಾನೆ ಎಂಬ ವಿಶ್ವಾಸ, ಧೈರ್ಯದಿಂದ ಎಲ್ಲಿದ್ದಾನೆ, ಒಳಗೇ ಇದ್ದಾನೆ – ದೃಢ ವಿಶ್ವಾಸ, ಧೈರ್ಯ ಬೇಕು. ಇನ್ನು ಅವರವರ ಮನೋಭಾವನೆ ಹ್ಯಾಗುಂಟೋ ಹಾಗೆ ಹೋಗಬಹುದಲ್ಲ? ಅವರವರ ಮನೋಸ್ಥಿತಿ ಹ್ಯಾಗುಂಟೋ ಹಾಗೆ ಹೋಗ್ಬಹುದು. surrender ಇಡೀ ಶರಣಾಗತಿ ಎಲ್ಲವೂ ನೀನೇ.

ಸುಧಾ – ಇವತ್ತು ನೀವು ಹೇಳಿದ್ದೇ ಅವರಿಗೆ ಬೇಕಾಗಿತ್ತಂತೆ ಇಷ್ಟು ದಿವಸ. ಆದರೆ ಅವರಿಗೆ ಇಷ್ಟು ದಿವಸ ಹುಡುಕಿದ್ದಾಗ, ಅವರಿಗೆ ಏನ್ಬೇಕೋ ಅದು ಸಿಕ್ಕಿರ್ಲಿಲ್ಲ. ಅದಕ್ಕೆ ಗೊಂದಲ ಜಾಸ್ತಿ ಇತ್ತಂತೆ. ಇವತ್ತು ನೀವು ಅವರಿಗೆ ಹೇಳಿದಾಗ ಏನೋ ಒಂಥರ ಸರಿ ಅಂತ ಒಂದು ದೃಢ ನಂಬಿಗೆ ಬಂದಿದ್ಯಂತೆ. ಅದರ ಮೇಲೆ ವಿಶ್ವಾಸ. ಅದರಿಂದ ಅವರಿಗನ್ನಿಸ್ತದೆ – ಇವತ್ತು ನನಗೆ ಏನೋ ಒಂದು ಉತ್ತರ ನಿಮ್ಮಿಂದ ಸಿಕ್ಕಿದೆ ಯಾವುದೋ ಒಂದು bridge connect ಆಗಿದೆ. ಏನೋ ಎಲ್ಲೋ ಅವರಿಗೆ ಸೇತುವೆ connect ಆಗ್ಬಿಟ್ಟು ನನಗೇನು ಹುಡುಕ್ತಿದ್ನೋ ಅದು ಸಿಕ್ಕಿದೆ ಅಂತ ಅವರಿಗೆ line ಸಿಕ್ಕಿದೆ ಅಂತ ದೃಢ ನಿಶ್ಚಯ ಆಗಿದ್ಯಂತೆ. ಮೌನದ ಬಗ್ಗೆ ಅವರಿಗೆ ಜಾಸ್ತಿ ಇತ್ತಂತೆ – ಮೌನಕ್ಕೆ ಹೇಗೆ

ಹೋಗೋದು ಅಂತ. ಈಗ ನೀವು ಹೇಳಿದ್ದು ಅವರಿಗೆ ಆ ಮೌನದ ಕಡೆ ಹ್ಯಾಗೆ ಹೋಗ್ಬೇಕು ಅಂತ ಸ್ವಲ್ಪ ಇದು ಬಂತಂತೆ ಅವರಿಗೆ, ವಿಶ್ವಾಸ ಬಂತಂತೆ.

ಅಜ್ಜ – ಆ ವಿಶ್ವಾಸವೇ ಮುಂದೆ ಕೊಂಡ್ಹೋಗ್ತದೆ. ಅವರಲ್ಲಿ ಆ ವಿಶ್ವಾಸವೇ ಮುಂದೆ ಕೊಂಡ್ಹೋಗ್ತದೆ.

ಸುಧಾ – ಅಂದ್ರೆ ಹೊರಗಡೆ ಅವರಿಗೆ ಕೂತಿದ್ದಾಗ, ಹೂಗಳು ಅರಳುವಾಗ, ಚೆನ್ನಾಗಿ ಹೊರಗಡೆ ಬಂದು ಈ ಪ್ರಕೃತಿಯಲ್ಲಿ ಪಕ್ಷಿಗಳು ಹಾಡುವಾಗ, ಎಷ್ಟು ಒಂಥರಾ ಸಂತೋಷ ಆಗತ್ತೆ ಆ ಮೌನದಲ್ಲಿ ಆ ಪರಿಸರದ ಮೌನದಲ್ಲಿ ಎಷ್ಟು ಒಳಗಡೆ ಸಂತೋಷ ಆಗತ್ತೆ, ಆ ಥರ ಒಳಗಡೇನೂ ಅನುಭವಿಸಬೇಕು. ಅಲ್ಲಿಂದ ಆ ಥರ ಅವರಿಗೆ ಹಾಡು ಹೇಳೋದಾಗಲಿ, ಮತ್ತೆ ಸೇವೆ ಮಾಡೋದಾಗಲಿ, ಆ ಒಳಗಡೆ ಅಂಥ ಮೌನದಿಂದ ಬರ್ಬೇಕು ಅಂತ ಅವರಿಗೆ ತುಂಬ ಹಂಬಲವಂತೆ.

ಅಜ್ಜ – ಆ ಮನಸ್ಸು ಅರಳುವಂತಾಗಲಿ – ಮನಸ್ಸು ಅರಳುವಂತಾಗಲಿ. ಈಗಿದ್ದ – ಈಗ ಹೀಗಿದ್ದ ಮನಸ್ಸು ಪ್ರತಿಯೊಬ್ಬನಿಗೆ ಹೀಗುಂಟು. ಬಾಹ್ಯ ಮನಸ್ಸು ಅದು ಅರಳಲಿ. ಅರಳುವಾಗ . . . ಆ ಮೊಗ್ಗು ಹ್ಯಾಗೆ ಅರಳಿದಾಗ ನಮ್ಮ ಮನಸ್ಸಿಗೆ, ಈ ಬಾಹ್ಯ ಮನಸ್ಸಿಗೆ ಹೇಗೆ ಒಂದು ಆನಂದವಾಗ್ತದಲ್ಲ, ಅದೇ ರೀತಿಯಲ್ಲಿ ಒಳಗೆ ಆ ಮನಸ್ಸು ಅರಳುವಾಗ ನೋಡಿ ಅದು ಸೇವಾಕಾರ್ಯ ಪ್ರಾರಂಭ ಅಲ್ಲಿಂದ. ನೋಡಿ, ಒಂದು ಹೂ ಅರಳುವಾಗ, ೧೦ ಜನರು ಅದನ್ನು ನೋಡಿ ಏನು ಸಂತೋಷ ಪಡ್ತಾರೆ, ಹಾಗೆ ಒಂದು ಮನಸ್ಸು ಅರಳಿದಾಗ ಅದರಿಂದ ಯಾವ ರೀತಿ ಆಗಬಹುದು ಯೋಚನೆ ಮಾಡಿ. ಹೌದು ಇದು ಸೇವೆ. ನಾವು ಮಾಡಬೇಕಾದ ಕೆಲಸ ಇದು. ಇದರಿಂದ ಇದುವೇ – ಆತ್ಮಸಾಕ್ಷಾತ್ಕಾರವು ಜಗತ್ಕಲ್ಯಾಣ. ಆತ್ಮಸಾಕ್ಷಾತ್ಕಾರವೇ ಜಗತ್ಕಲ್ಯಾಣ.

ಸುಧಾ – ನಿಮ್ಮನ್ನು ನೋಡೋ ಮುಂಚೆ ಅವರು ಧ್ಯಾನದಲ್ಲಿ ನಿಮ್ಮನ್ನು ಕಂಡ್ರಂತೆ. ನೀವ್ಹೋ ಏನೋ ಹೀಗೆ ಹೀಗೆ action ಮಾಡ್ತಿದ್ರಂತೆ. ಅವರಿಗೆ ಏನೂ ಗೊತ್ತಾಗ್ಲಿಲ್ವಂತೆ. ಆದರೆ ನಿಮ್ಮ actionನಲ್ಲಿ ಅವರಿಗೆ ತಿಳಿದು ಬಂದುದು ಏನು ಅಂದ್ರೆ ಇಲ್ಲಿ ಹೊರಗಡೆ ಏನಿಲ್ಲ. ನೀನು ಒಳಗ್ಹೋಗು ಅಂತ ಈ ಥರ action ಮಾಡ್ತಿದ್ರಂತೆ ಅವರಿಗೆ. ಅವರು ನಿಮ್ಮನ್ನು ಮೊದ್ಲೇ – ಇಲ್ಲಿಗೆ ಬರೋಕ್ಕ್ಮುಂಚೇನೇ ಧ್ಯಾನದಲ್ಲಿ ನೋಡಿದ್ದಾರಂತೆ. ಅವರು ಇಲ್ಲಿ ನೋಡಿದ್ದು ಅವರಿಗೆ ಜ್ಞಾಪಕ ಬಂದಿದ್ಯಂತೆ. ಧ್ಯಾನದಲ್ಲಿ ಒಬ್ಬ ಮುದುಕರಾಗಿ, ವಯಸ್ಸಾದವರನ್ನು ನೋಡ್ಬಿಟ್ಟು – ಇವರೇ ಅವರು ಅಂತ ನಿಮ್ಮನ್ನ ನೋಡಿದ್ಮೇಲೆ ಅವರಿಗೆ ಗೊತ್ತಾಯ್ತಂತೆ. ಮುಂಚೇನೇ ನೋಡಿದಾರಂತೆ. ಇಲ್ಲಿಗೆ ಬರೋ ಮುಂಚೇನೆ ನೀವು ಹೇಳಿದ್ರಂತೆ, ಆದ್ರೆ ಆವಾಗ ಅವರಿಗೆ ಗೊತ್ತಾಗ್ಲಿಲ್ವಂತೆ, ನೀವು ಏನು ಹೇಳ್ತಿದ್ರಿ ಅಂತ. ಅವರಿಗೆ ಆ ಥರ ಅನುಭವ ಬಂತು. ಹೊರಗಡೆ ಏನಿಲ್ಲ, ಒಳಗ್ಹೋಗು ಅಂತ ಹೀಗೆ ಸುಮ್ನೆ ಮಾಡಿ ಹೇಳ್ತಿದೀರ ಅಂತ ಅವರಿಗೆ ಕಾಣಿಸಿದೆ. ಧ್ಯಾನ ಮಾಡೋವಾಗ ಇವರಿಗೆ ನೀವೇ ಬರ್ತಾ ಇದ್ರಂತೆ. ಈ ರೂಪದಲ್ಲೇ ಕಾಣಿಸಿಕೊಂಡಿದೀರಂತೆ ಅವರಿಗೆ. ಆದ್ರೆ ಯಾರುಂತ ಗೊತ್ತಿರಲಿಲ್ವಂತೆ.

ಅಜ್ಜ – sudden photo ತೆಗಿ. (ರೋಸ್‌ಮೇರಿ photo ತೆಗೀತಾಳೆ). ಅವರವರ. . . .

ರಾಧಿಕಾ – ಅವರವರ ಯೋಗ್ಯತೆಯ . . . . (ಹಾಡು)

ಅಜ್ಜ – ಎಲ್ಲ ಅವನ ಕೆಲಸ, ಎಲ್ಲ ಅವನ ಕೆಲಸ. ಈಗ ಅಂತರ್ವಿಚಾರ ಇದ್ರೆ ಬಾಕಿ ಜನರಿಗೆ ಕೇಳಿಸುವುದಿಲ್ಲ. ಅವನಿಗೆ ಕೇಳಿಸ್ತದೆ. ಅತೀ ಹತ್ತಿರದಲ್ಲಿರುವವ ಅವ. ನಮ್ಮ ಅತೀ ಸಮೀಪದ ಬಂಧು ಅವ. ಆ ಅರ್ಹತೆಯನ್ನು ನಾವು ಪಡ್ದುಕೊಳ್ಳುವಂಥಾದ್ದೇ ಈಗ ಇರುವಂಥಾದ್ದು. ಮೌನ ಎಂದರೇನು? ಮಾತಿನ ಮೌನ ಅಲ್ಲ. ಮಾನಸಿಕ ಮೌನ. ಹಿಂದಿನ, ಕಳೆದ ವಿಚಾರಗಳನ್ನು, ಭವಿಷ್ಯತ್ ವಿಚಾರವನ್ನು ಎಲ್ಲವನ್ನು ಬಿಟ್ಟು, ನೋಡಿ ಇಷ್ಟೇ ಭಾವನಾತೀತನಾದಾಗ ಎಲ್ಲವೂ ಸಂಭವಿಸುತ್ತದೆ.

ಸುಧಾ – Photo ಈಗ ತೆಗೀರಿ ಅಂದಾಗ ಅವರಿಗೆ ಗಾಬರಿ ಆಯ್ತಂತೆ. Sudden ಆಗಿ photo ತೇಗೀರಿ ಈವಾಗ ಅಂದ್ರಲ್ಲ, ಯಾಕೆ ಹಾಗೆ ಹೇಳಿದಿರಿ ಅಂತ ಕೇಳ್ತಿದ್ದಾರೆ. ಈವಾಗ ಹೀಗೆ ಮಾಡಿದ್ರಲ್ಲ, ಅವರು ಧ್ಯಾನದಲ್ಲಿದ್ದಾಗ ನೀವು ಅವರಿಗೆ ಕೆಲವು ಸಲ ಹೀಗೆ ನಿನ್ನೆ ಮಾಡ್ತಿದ್ರಲ್ಲ, ಅದೇ ಥರ ಇತ್ತಂತೆ ಅವರಿಗೆ ಭಯ ಆಗ್ಬಿಡ್ತಂತೆ.

ಅಜ್ಜ – ಎಲ್ಲರೂ ೫ ನಿಮಿಷ ಮೌನವನ್ನು ಆಚರಿಸಿ.

* * * * * * * * * * * * * * *

ಮಂಜು – ಈಗ ನಿಮ್ಮನ್ನು ನೋಡಿದ್ಮೇಲೆ ನೀವೇ ಇರ್ಬೇಕು ಹಾಗೆ ಬಂದಿದ್ದು ಅಂತ ಅನ್ನಿಸ್ತಾ ಇದೆಯಂತೆ. ೬ ತಿಂಗಳ ಹಿಂದೆ ನೀವು 'ಸಾಧನ ಸಂಗಮಕ್ಕೆ' ಹೋಗಿದ್ರಾ ಅಜ್ಜ?

ಅಜ್ಜ – ಹೌದು ನಾವು ಅಲ್ಲಿಗೆ ಹೋಗ್ತಾ ಉಂಟು.

ಮಂಜು – ಆವಾಗ ನಿಮ್ಮನ್ನು ನೋಡಿದ ಜ್ಞಾಪಕ ಅಂತೆ. ಅದಾದ್ಮೇಲೆ ಅವರಿಗೆ ಈ ರೂಪದಲ್ಲಿ ಕಾಣಿಸ್ಕೊಂಡು ಹೀಗೀಗೆಲ್ಲ ಮಾಡ್ಬಿಟ್ಟು, ಈ ಪ್ರಪಂಚ ಒಂದು ನಾಟಕರಂಗ, ಒಳಗೆ ಹೋಗಿ ನಿಜವಾದ್ದನ್ನ ನೋಡ್ಬೇಕಾದ್ದು ಅಂತ ಹೇಳಿದ ಹಾಗೆ ಅನ್ನಿಸ್ತಾ ಇದೆಯಂತೆ.

ಶಾಂತ – ನಿಮ್ಮನ್ನ ೬ ತಿಂಗಳ ಹಿಂದೆ ನೋಡಿದ ಮೇಲೆ.

ಅಜ್ಜ – 'ಸಾಧನ ಸಂಗಮಕ್ಕೆ' ನಾವು ಬೆಳಿಗ್ಗೆ ಹೋಗಲಿಕ್ಕುಂಟು. ಮಂಗಳವಾರ ಪಟ್ಟಾಭಿ ಇಲ್ಲಿಗೆ ಬರ್ತಾರೆ. ನೋಡಿ ಪಟ್ಟಾಭಿ ಮಂಗಳವಾರ ಬೆಳಿಗ್ಗೆ ಇಲ್ಲಿ ಬಂದು ನಾವು ಅಲ್ಲಿಗೆ ಹೋಗಲಿಕ್ಕುಂಟು.

ಮಂಜು – ಇವರಿಗೆ ಆದರೆ ಬೆಳಿಗ್ಗೆ ಅಲ್ಲಿ ಬಂದು ನೋಡ್ತಾರಂತೆ. ಹಾಗಾಗ್ಲಿಲ್ಲ ಅಂದ್ರೆ ೬ ಗಂಟೆ ಮೇಲೆ ಇಲ್ಲಿ ಬಂದು ನೋಡ್ತಾರಂತೆ.

ಅಜ್ಜ – ಆಯ್ತು.

* * *